MR. SPEAKER.—That can be done. Now I call Sri Chimmanna Katti to commence his speech.

(i) Budget Estimates for 1979-80.

(ii) Supplementary Demands for Grants for 1978-79. General Discussion

(iii) Demand for Grants (Vote on Account) for 1979-80
(Debate continued)

ಶ್ರೀ ಬಿ. ಬಿ. ಚಿಮ್ಮನ ಕಟ್ಟಿ (ಬಾದಾಮಿ):—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಮಾಡಿದ ಭಾಷಣಕ್ಕೆ ಸ್ವಾಗತವನ್ನು ಬಯಸುತ್ತಾ, ಮೊದಲನೆಯದಾಗಿ, ನಾನು ಅದನ್ನು ಬೆಂಬಲಿಸುತ್ತೇನೆ ಅವರು ಮಾಡಿದ ಭಾಷಣದಲ್ಲಿ ಕೊಟ್ಟಿರುವ ಕೂಲಂಕುಷವಾದ ವಿವರಣೆಗಳನ್ನು ನಾನು ನೋಡಿದಾಗ, ಮುಖ್ಯವಾಗಿ ನೀರಾವರಿ ಯೋಜನೆಗಳಿಗೆ ಆದ್ಯತೆಯನ್ನು ಕೊಟ್ಟಿದ್ದಾರೆ, ಎನ್ನುವುದು ಕಾಣುತ್ತದೆ. ನೀರಾವರಿಯ ಲ್ಲಿ ಅವರು ಹಸಿರು ಕ್ರಾಂತಿಯನ್ನು ಮಾಡುವುದಕ್ಕಾಗಿ ಹೆಚ್ಚಿನ ಮೊತ್ತವನ್ನು ಇಟ್ಟಿದ್ದಾರೆ, ಇದು ನಿಜವಾಗಿಯೂ ಬಹಳ ಅಭಿಮಾನದ ಸಂಗತಿ. ಕಾರಣ ಇಷ್ಟೆ, ಸಾವಿರಾರು ವರ್ಷಗಳಿಂದ ರೈತ ಅನುಭವಿಸಿರತಕ್ಕ ಬರಗಾಲದ ಬವಣೆಯನ್ನು ಮರೆತು ಅವನು ಇನ್ನೂ ನೆಮ್ಮದಿಯಿಂದ ಜೀವಿಸತಕ್ಕ ಅವಕಾಶವನ್ನು ಒದಗಿಸಿಕೊಡತಕ್ಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರದವರು ಹಾಕಿಕೊಂಡಿದ್ದಾರೆ. ಇದರಿಂದ ಅನೇಕ ನೀರಾವರಿ ಕಾರ್ಯಕ್ರಮಗಳನ್ನು ನಮ್ಮ ರಾಜ್ಯ ಸರ್ಕಾರದವರು ಕೈಗೊಂಡನಂತರ ದೇಶದಲ್ಲಿ ಹಸಿರು ಕ್ರಾಂತಿಯನ್ನು ಕಾಣುವುದರಲ್ಲಿ ಯಾವ ಸಂದೇಹವೂ ಇಲ್ಲ, ಈ ನೀರಾವರಿ ಯೋಜನೆಯ ವಿಚಾರವನ್ನು ನಾನು ಹೇಳುತ್ತಾ ಇರುವಾಗ, ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಮಲಪ್ರಭ ಎಡದಂತೆ ಕಾಲುವೆಯಿಂದ ಸುಮಾರು ೭೦ ಸಾವಿರ ಎಕರೆಗೆ ನೀರಾವರಿಯಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ನನ್ನ ಒಂದು ಸಲಹೆ ಏನೆಂದರೆ, ಮಾಗೆ ನದಿಯನ್ನು ನವಿಲುತೀರ್ಥಕ್ಕೆ ಕೂಡಿಸಿದ್ದೇ ಆದರೆ ಬಿಜಾಪುರ ಜಿಲ್ಲೆಯಲ್ಲಿ ಮತ್ತು ಧಾರವಾಡ ಜಿಲ್ಲೆಯ ರೋಣ ತಾಲೂಕಿನಲ್ಲಿ ಇನ್ನಷ್ಟು ಉತ್ತಮ ಭೂಮಿಯ ಲ್ಲಿ ನೀರಾವರಿಯಾಗುತ್ತದೆ. ಈ ನೀರಾವರಿ ಕಾರ್ಯಕ್ರಮಗಳ ಜೊತೆಗೆ ಮಾನ್ಯಮಂತ್ರಿಗಳು ಒಕ್ಕಲತನದ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಅದನ್ನು ಪುನರ್‌ಘಟನೆ ಮಾಡಿದ್ದಾರೆ. ಇದರಿಂದ ರೈತರಿಗೆ ಹೆಚ್ಚಿನ ಅನುಕೂಲಗಳು ಲಭಿಸಲಿಕ್ಕೆ ಸಾಧ್ಯವಾಗುತ್ತವೆ. ಈಗಾಗಲೇ ಇರುವ ನಮ್ಮ ರೈತರ ಪರಿಸ್ಥಿತಿಯನ್ನು ನಾವು ತೆಗೆದುಕೊಳ್ಳುವುದಾದರೆ, ರೈತ ಬೆಳೆದ ಬೆಳೆಗೆ ಯೋಗ್ಯ ಬೆಲೆ ಸಿಕ್ಕುತ್ತಿಲ್ಲ. ಇದರಿಂದಾಗಿ ರೈತ ಬಹಳ ತೊಂದರೆಗೀಡಾಗಿದ್ದಾನೆ, ಅದಕ್ಕೋಸ್ಕರ ಸರ್ಕಾರದವರು ಇದರ ಕಡೆ ಹೆಚ್ಚಿನ ಗಮನ ಕೊಟ್ಟು ರೈತ ಯಾವರೀತಿಯ ಲ್ಲಿ ಕಷ್ಟಪಟ್ಟು ಪರಿಶ್ರಮದಿಂದ ಬೆಳೆಯನ್ನು ಬೆಳೆಯುತ್ತಾನೆ, ಅದಕ್ಕೆ ತಕ್ಕ ರೀತಿಯಲ್ಲಿ ಯೋಗ್ಯಬೆಲೆ ಸಿಕ್ಕುವಂತೆ ಆಗಬೇಕು, ಸರ್ಕಾರದವರು ಈ ದಿಸೆಯಲ್ಲಿ ಪ್ರಯತ್ನಮಾಡಬೇಕು ಎಂದು ನಾನು ಹಾರೈಸುತ್ತೇನೆ.

ವಿಶೇಷತಃ ನಮ್ಮ ಸರ್ಕಾರದವರು ಹಳ್ಳಿಯ ಜನರಿಗೆ ಉಪಯೋಗವಾಗುವಂಥ ಅಭಿಮಾನದಿಂದ ಹೇಳಬೇಕಾದ ಕಾರ್ಯಕ್ರಮ ಎಂದರೆ, ವಯಸ್ಕರ ಶಿಕ್ಷಣ ಪದ್ಧತಿಯ ಕಾರ್ಯಕ್ರಮ. ಏಕೆಂದರೆ, ನಮ್ಮ ಹಳ್ಳಿಯಲ್ಲಿರತಕ್ಕ ಜನ, ನಮ್ಮ ಅಂಧಃಕಾರದಲ್ಲಿ ಮುಳುಗಿದಂಥ ಜನ ನಮ್ಮ ಸರ್ಕಾರದವರು ಕೈಗೊಳ್ಳತಕ್ಕ ಯೋಜನೆಗಳಾಗಲೀ, ಸರ್ಕಾರದ ಉದ್ದೇಶವಾಗಲೀ ಜನರಿಗೆ ಅರ್ಥವಾಗಬೇಕಾದರೆ ಅವರಿಗೆ ಶಿಕ್ಷಣ ಬೇಕು. ಅಕ್ಷರ ಜ್ಞಾನ ಇಲ್ಲದೆ ಏನನ್ನೂ ಸಾಧಿಸುವುದಕ್ಕಾಗುವುದಿಲ್ಲ, ಕೇಂದ್ರಸರ್ಕಾರದವರು ಈ ದಿಸೆಯಲ್ಲಿ ಯೋಜನೆಯನ್ನು ಕೈಗೊಂಡು, ಅದರಲ್ಲಿ ವಿಶೇಷತಃ ನಮ್ಮ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ಇದರಲ್ಲಿ ತೋರಿಸಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ, ಇದು ಬಹಳ ಅಭಿಮಾನದ ಸಂಗತಿ. ಇದರಿಂದ ನಮ್ಮ ರಾಜ್ಯದಲ್ಲಿರತಕ್ಕ ಜನರಿಗೆ ಶಿಕ್ಷಣದ ಮಟ್ಟ ಹೆಚ್ಚಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ನಮ್ಮ ಮಾನ್ಯ ಆರೋಗ್ಯ ಮಂತ್ರಿಗಳು, ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಆಶ್ರಯದಲ್ಲಿದ್ದ ದವಾಖಾನೆಗಳನ್ನು ಸರ್ಕಾರದ ಸ್ವಾಧೀನಕ್ಕೆ ಪಡೆಯಲು ಮುಂದೆ ಬಂದಿದ್ದಾರೆ. ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಆರ್ಥಿಕ ಸ್ಥಿತಿ ಇದರಿಂದ ಸುಧಾರಣೆಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಹಾಗೆಯೇ, ಕನ್ನಡದ ಬಳಕೆಗಾಗಿ, ಕನ್ನಡದ ಅಭಿವೃದ್ಧಿಗಾಗಿ ನಮ್ಮ ಸರ್ಕಾರದವರು ಹೆಚ್ಚಿನ ಆಸಕ್ತಿ ವಹಿಸಿ ದುಡಿಯುತ್ತಾ ಬಂದಿದ್ದಾರೆ. ಪ್ರತಿಯೊಂದು ಸರ್ಕಾರಿ ರಂಗದಲ್ಲಿಯೂ ಕೂಡ ಕನ್ನಡ ಭಾಷೆಯನ್ನು ಅಳವಡಿಸಿಕೊಳ್ಳಬೇಕು ಎನ್ನುವ ದಿಸೆಯಲ್ಲಿ ನಮ್ಮ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಈ ಮಾತನ್ನು ಹೇಳುವುದಕ್ಕೆ ನಿಜವಾಗಿಯೂ ನಾನು ಸಂತೋಷಪಡುತ್ತೇನೆ, ಮತ್ತು ಇದು ನಾವೆಲ್ಲರೂ ಸ್ವಾಗತ ಮಾಡತಕ್ಕ ವಿಚಾರ.

[MADAM DEPUTY SPEAKER in the Chair]

೩–೦೦ ಪಿ. ಎಂ.

ಇನ್ನು ಮತ್ತೊಂದು ಮುಖ್ಯವಾದಂಥ ವಿಷಯವೇನೆಂದರೆ, ನಮ್ಮ ಘನಸರ್ಕಾರದವರು ಕುರಿ ಮತ್ತು ಕುರಿ ಸಾಕಾಣಿಕೆ ಅಭಿವೃದ್ಧಿ ಮಂಡಲಿಯನ್ನು ೧೯೭೫ರಲ್ಲಿ ಸ್ಥಾಪನೆ ಮಾಡಿದರು. ಈ ಬಗ್ಗೆ ತಾ. ೩೧–೩–೧೯೭೫ರಲ್ಲಿ ನೋಟಿಫಿಕೇಷನ್ ಹೊರಡಿಸಲಾಯಿತು. ಇದು ಜಾರಿಗೆ ಬಂದಿದ್ದು ತಾ. ೧೦–೩–೧೯೭೫ರಲ್ಲಿ. ಇದರ ಬೋರ್ಡು ರಚನೆಯಾದ ಮೇಲೆ ಇಲ್ಲಿಯವರೆಗೆ ಅಲ್ಲಿ ನಡೆದಿರುವ ಕಾರ್ಯಕ್ರಮಗಳನ್ನು ಗಮನಕ್ಕೆ ತೆಗೆದುಕೊಂಡರೆ ನನಗೆ ಬಹಳ ದುಃಖವಾಗುತ್ತದೆ, ನೋವಾಗುತ್ತದೆ ಹಾಗೂ ಖೇದವಾಗುತ್ತದೆ. ಇದಕ್ಕೆ ಕಾರಣ ಕರ್ತರು ಯಾರು ಎಂಬುದನ್ನು ಸರ್ಕಾರದವರೇ ಗಮನಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಸಂಬಂಧಪಟ್ಟ ಕಾಯ್ದೆ ಜಾರಿಗೆ ಬಂದಿದ್ದು ೧೯೭೫ರಲ್ಲಿ ನಂತರ ಮಂಡಲಿಯವರು ಜನರಲ್ ಡ್ರಾಫ್ಟ್ ರೂಲ್ಸ್‌ನ್ನು ತಾ. ೧–೭–೧೯೭೫ರಲ್ಲಿ ಸರ್ಕಾರಕ್ಕೆ ಅಪ್ರೂವಲ್‌ಗಾಗಿ ಕಳುಹಿಸಿದರು. ಅಪ್ರೂವ್ಡ್ ಡ್ರಾಫ್ಟ್ ರೂಲ್ಸ್ ಸರ್ಕಾರದಿಂದ ತಾ. ೪–೩–೧೯೭೭ರಲ್ಲಿ ಮಂಡಲಿಗೆ ಬಂತು. ನಂತರ ಸಿ. ಅಂಡ್ ಆರ್. ಡ್ರಾಫ್ಟ್ ರೂಲ್ಸ್‌ನ್ನು ಸರ್ಕಾರಕ್ಕೆ ತಾ. ೨೨–೮–೧೯೭೫ರಲ್ಲಿ ಕಳುಹಿಸಿಕೊಟ್ಟರು. ಆದರೆ ೩ ವರ್ಷಗಳಷ್ಟು ತಡವಾಗಿ ಅಂದರೆ ೧೯೭೮ರಲ್ಲಿ ಈ ಬಗ್ಗೆ ಅಬ್ಜಕ್ಷನ್ ಕಾಲಫಾರ್ ಮಾಡಲಾಯಿತು ತಾ ೧೦-೧೧-೧೯೭೫ರಲ್ಲಿ ಇದೇ ಮಂಡಲಿಯವರು ಸರ್ಕಾರಕ್ಕೆ ಲೋನ್ಸ್ ಅಂಡ್ ಸಬ್‌ವೆನ್‌ಷನ್ ರೂಲ್ಸ್‌ನ್ನು ಕಳುಹಿಸಿಕೊಟ್ಟರು. ಇದನ್ನೆಲ್ಲಾ ಸರ್ಕಾರದವರು ಅಪ್ರೂವ್ ಮಾಡದೆ ತಮ್ಮಲ್ಲಿ ಹಾಗೆಯೇ ಉಳಿಸಿಕೊಂಡುಬಿಟ್ಟಿದ್ದಾರೆ. ಇದರಿಂದ ಮಂಡಲಿಯವರು ಮಾಡತಕ್ಕಂತ ಕಾರ್ಯಕಲಾಪಗಳು ಸ್ಥಗಿತಗೊಂಡಿದೆ. ಅವರು ಹಾಕಿಕೊಂಡಿರುವ ಯೋಜನೆಗಳ ಪೈಕಿ ಒಂದು ಪೈಸೆಯಷ್ಟು ಕೆಲಸ ಸಹ ಇಲ್ಲಿಯವರೆಗೆ ಆಗಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಈ ಒಂದು ಸಮಸ್ಯೆಯನ್ನು ಹೇಳುವಾಗ, ಸರ್ಕಾರದವರು ಈ ಮಂಡಳಿಗೆ ೬ ಲಕ್ಷ ರೂ.ಗಳನ್ನು ೧೯೭೫–೭೬ರಲ್ಲಿ ಮಂಜೂರು ಮಾಡಿದರು. ಈ ಹಣದಲ್ಲಿ ೧೯೭೫–೭೬ರಲ್ಲಿ ೧,೩೧,೩೭೩–೬೭ ರೂ.ಗಳನ್ನು ೧೯೭೬–೭೭ರಲ್ಲಿ ೧,೧೬,೬೦೬–೫೯ ರೂ. ಗಳನ್ನು, ೧೯೭೭–೭೮ರಲ್ಲಿ ೧,೦೭,೮೬೭–೫೪ ರೂ. ಗಳನ್ನು ಮತ್ತು ೧೯೭೮–೭೯ರಲ್ಲಿ ೫೪,೧೧೧–೧೮ ರೂ. ಗಳನ್ನು ಖರ್ಚು ಮಾಡಲಾಯಿತು. ಬೋರ್ಡಿನಲ್ಲಿರತಕ್ಕಂಥ ಸದಸ್ಯರು ಟಿ. ಎ. ಮತ್ತು ಡಿ. ಎ. ಪಡೆದುಕೊಳ್ಳಲು ಹಾಗೂ ಅಲ್ಲಿರುವ ಸೆಕ್ರೆಟರಿಯವರಿಗಾಗಿ ಈ ಹಣವನ್ನು ಖರ್ಚು ಮಾಡಿದ್ದಾರೆ. ಈ ಬಗ್ಗೆ ನಾನು ಕೇಳತಕ್ಕಂಥ ಪ್ರಶ್ನೆ ಏನೆಂದರೆ, ಈ ೬ ಲಕ್ಷ ರೂಪಾಯಿಗಳಿಂದ ಕೇವಲ ಆಡಳಿತ ಮಂಡಲಿಯ ಸದಸ್ಯರಿಗೆ ಲಾಭವಾಯಿತೇ ಹೊರತು ಕುರಿಯನ್ನು ಸಾಕುವವರಿಗೆ ಸಹಾಯವಾಗಲಿಲ್ಲ. ಇದು ಸರಿಯಲ್ಲ; ಕುರಿಯನ್ನು ಸಾಕುವುದಕ್ಕೆ ಮುಂದೆ ಬರುವ ರೈತರಿಗೆ ಎಲ್ಲ ರೀತಿಯ ಸಹಾಯ ಹಾಗೂ ಸವಲತ್ತು ಸರ್ಕಾರದಿಂದ ಸಿಗುವಂತಾಗಬೇಕು, ಈ ಮಂಡಲಿಯವರು ೩.೫ ಲಕ್ಷ ರೂ.ಗಳ ಒಂದು ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಿದರು. ಆದರೆ ಅದು ಅಪ್ರೂವ್ ಆಗಲಿಲ್ಲ. ಇದಕ್ಕೆ ಕಾರಣ, ಸಿ. ಅಂಡ್ ಆರ್. ರೂಲ್ಸ್ ಹಾಗೂ ಲೋನ್ಸ್ ಅಂಡ್ ಸಬ್‌ವೆನ್‌ಷನ್ ರೂಲ್ಸ್‌ನ್ನು ಸರ್ಕಾರದವರು ಇನ್ನು ಅಪ್ರೂವ್ ಮಾಡದಿರುವುದು. ಇದೇ ಕಾರಣದಿಂದ ಅವರು ಕಳುಹಿಸಿದ ಯಾವ ಯೋಜನೆಗಳೂ ಕಾರ್ಯರೂಪಕ್ಕೆ ಬಂದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ತಾ. ೩೦–೩–೧೯೭೭ರಲ್ಲಿ ೨೫ ಲಕ್ಷ ರೂ.ಗಳ ಲಂಪ್‌ಸಮ್ ಗ್ರಾಂಟ್‌ನ್ನು ಈ ಬೋರ್ಡಿನ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಕೊಟ್ಟರೂ ಸಹ ಸಿ. ಅಂಡ್ ಆರ್. ರೂಲ್ ಇಲ್ಲದಿರುವ ಕಾರಣ ಆ ಹಣವೆಲ್ಲ ಲ್ಯಾಪ್ಸ್ ಆಯಿತು. ಇದೇ ಕಾರಣದಿಂದ ಈ ಮಂಡಲಿಗೆ ಒಂದು ಪೈಸೇ ಕೂಡ ದಕ್ಕಿಲ್ಲ. ಈ ವಿಷಯನ್ನು ಹೇಳುವಾಗ, ಚಳ್ಳಕೆರೆಯಲ್ಲಿ ದೊಡ್ಡ ಪ್ರಮಾಣದ ಷೀಪ್ ಬ್ರೀಡಿಂಗ್ ಫಾರಂ ಇದೆ. ಶೇಕಡಾ ನೂರರಷ್ಟು ಕೇಂದ್ರ ಸರ್ಕಾರದ ಸಹಾಯದಿಂದಲೇ ಇದು ನಡೆಯುತ್ತಿದೆ. ಆದರೆ ನಮ್ಮ ಅಧಿಕಾರಿಗಳ ಒಂದು ನಿರ್ಲಕ್ಷತನದಿಂದ ಪ್ರತಿವರ್ಷವೂ ೬ ರಿಂದ ೧೦ ಲಕ್ಷ ರೂ.ಗಳಷ್ಟು

ಹಣ ಲ್ಯಾಪ್ಸ್ ಆಗಿ ವಾಪಸ್ ಕೇಂದ್ರ ಸರ್ಕಾರಕ್ಕೇ ಹೋಗುತ್ತಿದೆ. ಈಗ ನಮ್ಮ ರಾಜ್ಯದಲ್ಲಿ ನಾಲ್ಕು ಸರ್ಕಾರದ ಫಾರಂಗಳಿವೆ. ಈ ಫಾರಂಗಳಿಂದ ನಮ್ಮ ರಾಜ್ಯದಲ್ಲಿರುವ ಕುರಿ ಸಾಕುವ ಜನರಿಗೆ ಕಳೆದ ೩೦ ವರ್ಷಗಳಿಂದಲೂ ಲಾಭವಾಗಿಲ್ಲ. ಈ ಫಾರಂಗಳ ಜೊತೆಗೆ ನಮ್ಮ ರಾಜ್ಯದಲ್ಲಿ ೧೧ ಕುರಿಗಾರರ ಅಸೋಸಿಯೇಷನ್‌ಗಳಿವೆ. ಇದರಲ್ಲಿ ಎರಡನ್ನು ಕುರಿಗಾರರೇ ಸ್ಥಾಪಿಸಿಕೊಂಡು ಅವರೇ ನಡೆಸಿಕೊಂಡು ಹೋಗುತ್ತಿದ್ದಾರೆ. ಇವೆರಡರ ಪೈಕಿ ಒಂದು ಧಾರವಾಡದಲ್ಲಿಯೂ ಇನ್ನೊಂದು ಬೆಳಗಾಂನಲ್ಲಿಯೂ ಇದೆ. ಈ ಎರಡೂ ಸಂಸ್ಥೆಗಳಿಗೆ ಇಲ್ಲಿಯವರೆಗೆ ಸರ್ಕಾರದಿಂದ ಯಾವುದೇ ರೀತಿಯ ಸಹಾಯವೂ ಸಿಕ್ಕಿಲ್ಲ ಈ ಮೊದಲು ಸರ್ಕಾರದವರು ಈ ಎರಡೂ ಸಂಸ್ಥೆಗಳಿಗೆ ನಾಲ್ಕನೇ ದರ್ಜೆಯ ೩ ಜನ ನೌಕರನ್ನು ಕೊಡಲು ಒಪ್ಪಿಕೊಂಡಿದ್ದರೂ ಸಹ ಇವೊತ್ತಿನವರೆಗೂ ಕೊಟ್ಟಿಲ್ಲ. ಜೊತೆಗೆ ೫ ಸಾವಿರ ರೂಪಾಯಿಗಳ ಧನಸಹಾಯ ಕೊಡಲಾಗುವುದೆಂದು ಒಪ್ಪಿಕೊಂಡಿದ್ದರೂ ಸಹ ಸರ್ಕಾರದವರು ಇಲ್ಲಿಯವರೆಗೆ ಕೊಟ್ಟಿಲ್ಲ. ಇದು ದುರಾದೃಷ್ಟಕರವಾದಂಥ ಸಂಗತಿ. ಈ ರೀತಿಯಿಂದ ಈ ಎರಡೂ ಸಂಸ್ಥೆಗಳು ಅಧೋಗತಿಗೆ ಇಳಿಯಲು ಕಾರಣರಾದವರಿಗೆ ಸರ್ಕಾರದವರು ಶಿಕ್ಷೆ ವಿಧಿಸುತ್ತಾರೆಂದೂ ನಾನು ತಿಳಿಯುತ್ತೇನೆ. ತಪ್ಪು ಮಾಡಿದವರು ರಾಜಕೀಯ ಮನುಷರೇ ಆಗಲೀ, ರಾಜಕಿಯೇತರ ಅಧಿಕಾರಿಗಳೇ ಆಗಲೀ. ಒಟ್ಟಿನಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕುರಿಗಳ ಅಭಿವೃದ್ಧಿಯ ಬಗ್ಗೆ ಮಾತನಾಡುವಾಗ, ಈ ಕುರಿ ಹಿಂಡುಗಳಿಗೆ ಬರುವ ಖಾಯಿಲೆಗೆ ಔಷಧಗಳನ್ನು ಒದಗಿಸುವ ಬಗ್ಗೆ ಕೆಲವೊಂದು ವಿಚಾರಗಳನ್ನು ಹೇಳುತ್ತೇನೆ. ಸರ್ವೇಸಾಧಾರಣವಾಗಿ ಪ್ರತಿ ತಾಲ್ಲೂಕಿನಲ್ಲಿಯೂ ಸಾಕಷ್ಟು ಪ್ರಮಾಣದಲ್ಲಿ ಕುರಿ ಹಿಂಡುಗಳಿರುತ್ತವೆ. ಈ ಕುರಿಗಳನ್ನು ಸಾಕಿ ಜೀವನ ಮಾಡುವವರು, ಕುರಿಗಳಿಗೇನಾದರೂ ಖಾಯಿಲೆ ಬಂದರೆ ಕುರಿಗಳ ಹಿಂಡನ್ನು ದವಾಖಾನೆಗೆ ತಂದು ತೋರಿಸುವುದಕ್ಕೆ ಸಾಧ್ಯವೇ ? ಇದರ ಜೊತೆಗೆ ದವಾಖಾನೆಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಔಷಧಗಳೂ ಸಹ ಇರುವುದಿಲ್ಲ. ಇನ್ನು ಮುಂದೆಯಾದರೂ ಸಾಕಷ್ಟು ಪ್ರಮಾಣದಲ್ಲಿ ಔಷಧಗಳನ್ನು ಒದಗಿಸಬೇಕಲ್ಲದೆ, ಕುರಿ ಹಿಂಡುಗಳಿರುವ ಕಡೆಗೆ ಡಾಕ್ಟರ್‌ಗಳು ಹೋಗಿ ಚಿಕಿತ್ಸೆ ಮಾಡುವಂತಹ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಹಾನಿಯ ಪ್ರಮಾಣ ಜಾಸ್ತಿಯಾಗಬಹುದು. ಈಗ ಪೆರಾಜಿಟಿಕ್ ಎಂಬ ಖಾಯಿಲೆ ಕುರಿಗಳಿಗೆ ಪ್ರತಿವರ್ಷವೂ ಬರುತ್ತದೆ. ಆಗ ಲಕ್ಷಗಟ್ಟಲೆ ಕುರಿಗಳು ಸಾಯುತ್ತವೆ ಇದರಿಂದ ಶೇಕಡಾ ೧೫ರಷ್ಟು ಕುರಿಗಳು ನಾಶವಾಗುತ್ತವೆ. ಇದರಿಂದ ನಮ್ಮ ರಾಜ್ಯಕ್ಕೆ ಒಂದು ಕೋಟಿ ರೂ.ಗಳಷ್ಟು ಹಾನಿಯಾಗುತ್ತಿದೆ ಈ ಹಾನಿಯನ್ನು ತಡೆಗಟ್ಟಲು ಔಷಧಗಳ ಸರಬರಾಜನ್ನು ಸರ್ಕಾರದವರು ಹೆಚ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮುಖ್ಯವಾಗಿ ಕುರಿಗಳ ಅಭಿವೃದ್ಧಿಗಾಗಿ ಮಾರುಕಟ್ಟೆ ವ್ಯವಸ್ಥೆಯನ್ನು, ತರಬೇತಿ ಕೇಂದ್ರಗಳನ್ನು ಹಾಗೂ ಪಶು ವೈದ್ಯಕೀಯ ಸೌಲಭ್ಯಗಳನ್ನು ಹೆಚ್ಚು ಮಾಡಬೇಕೆಂದು ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟು ಮತ್ತೊಮ್ಮೆ ಮಾನ್ಯ ಸಚಿವರು ಮಂಡಿಸಿದಂಥ ಭಾಷಣಕ್ಕೆ ನನ್ನ ಬೆಂಬಲವನ್ನು ಸೂಚಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಭೀಮಣ್ಣ ಎಸ್. ಖಂಡ್ರೆ (ಭಾಲ್ಕಿ) :—ಮಾನ್ಯ ಅಧ್ಯಕ್ಷಿಣಿಯವರೇ, ನಾನು ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಮೊದಲು ತಮ್ಮ ಗಮನವನ್ನು ಸೆಳೆಯುವುದೇನೆಂದರೆ, ನಾನು ಕಳೆದ ೩ ಸೆಷನ್‌ಗಳಿಂದ ಇಲ್ಲಿ ಮಾತನಾಡಿಲ್ಲ. ಆದ ಕಾರಣ ನನಗೆ ಮಾತನಾಡಲು ಹೆಚ್ಚು ಸಮಯ ಬೇಕಾಗುತ್ತದೆ.

ಉಪಾಧ್ಯಕ್ಷರು:—೩೦ ನಿಮಿಷಗಳ ಕಾಲ ಮಾತನಾಡಬಹುದು.

ಶ್ರೀ ಭೀಮಣ್ಣ ಎಸ್. ಖಂಡ್ರೆ: ಜನತಾ ಪಾರ್ಟಿಯವರು ೮ ಗಂಟೆಗಳ ಕಾಲ ಮಾತನಾಡುತ್ತಾರೆ. ನಾನು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷದ ಸದಸ್ಯನಾದ ಕಾರಣ ಒಂದು ಗಂಟೆ ಸಮಯವನ್ನಾದರೂ ಕೊಡಬೇಕು. ಇಲ್ಲದಿದ್ದರೆ ನಾನು ಮಾತನಾಡುವುದಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ:—ಅವರು ಕಾಂಗ್ರೆಸ್ ಪಕ್ಷದ ಏಕಮಾತ್ರ ಸದಸ್ಯರಾಗಿದ್ದಾರೆ.

ಉಪಾಧ್ಯಕ್ಷರು: ತಾವು ಪ್ರಾರಂಭಮಾಡಿ.

ಶ್ರೀ ಭೀಮಣ್ಣ ಎಸ್. ಖಂಡ್ರೆ: -ಮಾನ್ಯ ಅಧ್ಯಕ್ಷರೆ, ಇವತ್ತಿನ ಈ ಬಡ್ಜೆಟ್ ನೋಡಿದರೆ ನನಗೆ ಇದರ ಬಗ್ಗೆ ಬಹಳ ಗೌರವವಿದೆ. ಇವತ್ತು ನನ್ನನ್ನು ಇಲ್ಲಿ ಆರಿಸಿ ಕಳುಹಿಸಿರತಕ್ಕ ಜನತೆ ಏನಿದ್ದಾರೆ ಅವರು ಏನು ಹೇಳುತ್ತಾರೆ ಎಂದರೆ ಸತ್ಯವನ್ನೇ ಹೇಳಬೇಕು, ನ್ಯಾಯವಾಗಿ ನಡೆಯಬೇಕು ಎಂದು. ಆ ದೃಷ್ಟಿಯಿಂದ ನಾನು ಇವತ್ತು ಮಾತನಾಡಬೇಕಾಗಿದ್ದರೆ ನ್ಯಾಯ ನಿಷ್ಠುರವಾಗಿ ಮಾತನಾಡಬೇಕಾಗುತ್ತದೆ. ನಮ್ಮ

ದೇಶದಲ್ಲಿ ಶೇಕಡಾ ೮೦ ಕಿಸಾನರೇನಿದ್ದಾರೆ ಅಂದರೆ ರೈತರೇನಿದ್ದಾರೆ ಅವರ ಬಗ್ಗೆ ಬಡ್ಜೆಟ್‌ನಲ್ಲಿ ಏನು ಹಣ ಇಟ್ಟಿದ್ದಾರೆ, ಮತ್ತು ಅವರ ಮೇಲೆ ಯಾವ ರೀತಿ ತೆರಿಗೆಯನ್ನು ಹಾಕಿ ಅದನ್ನು ವಸೂಲು ಮಾಡುತ್ತಿದ್ದಾರೆ, ಎಂಬುದನ್ನು ನೋಡುವುದಾದರೆ ಹೊರಲಾರದಷ್ಟು ತೆರಿಗೆಯನ್ನು ಹಾಕಿ ಯಥಾಪ್ರಕಾರ ಹಿಂದೆ ಏನು ಸೌಲಭ್ಯ ಕೊಡುತ್ತಿದ್ದರೋ ಅದೇ ಸೌಲಭ್ಯಗಳನ್ನು ಕೊಡುತ್ತಿದ್ದಾರೆ. ಇವರು ರೈತ ಜನಗಳನ್ನು ದನಗಳೆಂದು ತಿಳಿದಿದ್ದಾರೆ. ರೈತರಿಗೆ ಏನು ಸೌಲಭ್ಯಗಳನ್ನು ಒದಗಿಸಿಕೊಡಬೇಕೋ ಅದನ್ನು ಒದಗಿಸಿಕೊಡದೇ ಇರುವುದರಿಂದ ನಾನು ಈ ಸಬ್ಜೆಕ್ಟನ್ನು ಖಂಡನೆ ಮಾಡುತ್ತೇನೆ. ಹಾಗೂ ವಿರೋಧ ಮಾಡುತ್ತೇನೆ. ಈ ಸರ್ಕಾರದ ನೀತಿ, ಪಾಲಿಸಿ ಏನಿದೆ ಅದು ರಾಷ್ಟ್ರ ವಿರೋಧಿ ನೀತಿ. ಸಮಾಜ ವಿರೋಧಿ ನೀತಿ. ಚರಿತ್ರೆ ವಿರೋಧಿ ನೀತಿ ಆಗಿರುವುದರಿಂದ ನಾನು ಇದನ್ನು ಧಿಕ್ಕಾರ ಮಾಡುತ್ತೇನೆ. ಅದಕ್ಕೆ ಕಾರಣವೇನೆಂದರೆ, ಒಂದನೇದು: ಜಾತ್ಯಾತೀತ ರಾಷ್ಟ್ರದಲ್ಲಿ ಜಾತಿಯ ವಿಷ ಬೀಜವನ್ನು ಬಿತ್ತುವುದು, ಎರಡನೆಯದು ಸಮಾಜವಾದ ರಾಷ್ಟ್ರದಲ್ಲಿ ಸಮಾಜದ್ರೋಹ ನಡೆಸಿದ್ದಾರೆ, ಮೂರನೆಯದು ಈ ಸರ್ಕಾರ ಜನತೆಯ ಹೆಸರಿನಲ್ಲಿ, ಜನತಂತ್ರದ ಹೆಸರಿನಲ್ಲಿ ಇಡೀ ದೇಶದಲ್ಲಿ ರಾಜಕೀಯ ಕುತಂತ್ರವನ್ನು ನಡೆಸಿದ್ದಾರೆ. ನಾಲ್ಕನೆಯದು ಸಹಕಾರ ತತ್ವವೇ ಸಮಾಜವಾದದ ಬುನಾದಿ ಆಗಿರುವಾಗ ಸಹಕಾರಿ ಆಕ್ಟನ್ನು ತಿದ್ದುಪಡಿ ಮಾಡಿ ಸೆಕ್ಷನ್ ೧೪ (ಎ); ೩೦ (ಎ); ೫೩ (ಎ); ೧೨೨ (ಎ), ಈ ಪ್ರಕಾರ ನಾಲ್ಕು ತಿದ್ದುಪಡಿಗಳನ್ನು ಮಾಡಿ ಸಹಕಾರ ತತ್ವದ ಸಿದ್ಧಾಂತವನ್ನು ಹೊಡೆದು ತುಳಿದು ಕೊಲೆ ಮಾಡಿದ್ದಾರೆ. ಈ ರೀತಿ ಮಾಡಿದರೆ ಯಾವ ರೀತಿ ಸಮಾಜವಾದವನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಐದನೆಯದಾಗಿ ಪ್ರಜಾಪ್ರಭುತ್ವದಲ್ಲಿ ಪಂಚಾಯಿತಿ ರಾಜ್ಯವನ್ನು ಸ್ಥಾಪನೆ ಮಾಡುವುದಾದರೆ ಪ್ರಜಾಪ್ರಭುತ್ವವು ಯಶಸ್ವಿಯಾಗಿ ನಡೆಯುತ್ತದೆಂದು ಹೇಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಅಭಿಮಾನದಿಂದ ಹೇಳಿದ್ದಾರೆ ಕೇಂದ್ರ ಸರಕಾರದವರು ನಮ್ಮಿಂದ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿದ್ದಾರೆ, ನಮಗೆ ಅಧಿಕಾರ ಕೊಡಬೇಕು ಎಂದು ಇದಕ್ಕೆ ನಾವೆಲ್ಲಾ ಸಪೋರ್ಟ್ ಮಾಡಿದ್ದೇವೆ. ಈ ಸರಕಾರಕ್ಕೆ ನಾಚಿಕೆಯಾಗಬೇಕು, ಕೇಂದ್ರಸರ್ಕಾರಕ್ಕೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ಹೇಳಿ ಇಲ್ಲಿ ಪಂಚಾಯಿತಿ, ತ ಲ್ಲೂಕ್ ಬೋರ್ಡ್ ಮತ್ತು ನಗರಸಭೆ ಇವುಗಳ ಅಧಿಕಾರವನ್ನು ಕೇಂದ್ರೀಕೃತ ಮಾಡಿಕೊಂಡಿದ್ದೀರಿ. ಇವತ್ತು ಈ ಸಂಸ್ಥೆಗಳಲ್ಲಿ ಒಂದು ಪೈಸಾ ಹಣ ಕೂಡ ಇಲ್ಲ. ಇವುಗಳು ಹೆಸರಿಗೆ ಮಾತ್ರ ಸಂಸ್ಥೆಗಳಾಗಿವೆ. ಮಾನ್ಯ ಹಣಕಾಸಿನ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಈ ಸಂಸ್ಥೆಗಳಲ್ಲಿ ರೊಕ್ಕ ಇಲ್ಲ ಎಂದು ಹೇಳಿದ್ದಾರೆ. ಆದರೆ ಅವುಗಳಿಗೆ ಯಾವ ರೀತಿ ಹಣವನ್ನು ಒದಗಿಸುತ್ತೀರಿ? ಅವುಗಳ ಸಂಪೂರ್ಣವಾದ ಅಧಿಕಾರವನ್ನು ತಾವೇ ಇಟ್ಟುಕೊಂಡು ಈ ಮೂರು ಸಂಸ್ಥೆಗಳನ್ನು ಭಿಕ್ಷುಕರನ್ನಾಗಿ ಮಾಡಿದ್ದಾರೆ. ಯಾವುದೋ ಒಂದು ದುರುದ್ದೇಶವನ್ನು ಇಟ್ಟುಕೊಂಡು ಇವರು ಈ ರೀತಿ ಮಾಡಿದ್ದಾರೆ. ಶೇಕಡ ೮೦ ಪರತಕ್ಕ ರೈತರಿಗೆ ರೊಕ್ಕವನ್ನು ಖರ್ಚು ಮಾಡತಕ್ಕಂತ ಸಂಸ್ಥೆಗಳನ್ನು ಭಿಕ್ಷುಕರನ್ನಾಗಿ ಮಾಡಿದ್ದಾರೆ. ಗುಲ್ಬರ್ಗ ಡಿ.ಸಿ.ಸಿ. ಬ್ಯಾಂಕಿನಲ್ಲಿ ಯಾವ ರೀತಿ ನಡೆಯಿತು ಎಂಬುದು ತಮಗೆಲ್ಲಾ ಗೊತ್ತಿದೆ. ಮತ್ತೊಂದು ವಿಷಯವೇನೆಂದರೆ ಯೂನಿಫಾರಂ ಯೂನಿವರ್ಸಿಟಿ ಆಕ್ಟ್ ಮಾಡಿ, ವಿಶ್ವ ವಿದ್ಯಾನಿಲಯ ಅಟಾನಮಸ್ ಬಾಡಿ ಆಗಿದ್ದರೂ ಕೂಡ ಅದರ ಸ್ವಾತಂತ್ರ್ಯವನ್ನು ಕಸಿದುಕೊಂಡಿದ್ದಾರೆ. ಈ ಯುನಿವರ್ಸಿಟಿ ಎಲೆಕ್ಷನ್‌ನಲ್ಲಿ ತಮಗೆ ಯಾರು ಯಾರು ಬೇಕೋ ಅವರನ್ನೇ ನೇಮಿಸಿಕೊಂಡಿದ್ದಾರೆ.

ಇನ್ನು ಪಬ್ಲಿಕ್ ಹೆಲ್ತ್ ಬಗ್ಗೆ ಹೇಳಬೇಕಾದರೆ, ಸಿಗರೇಟ್ ಪಾಯ್ಜನಸ್ ಎಂದು ಹೇಳುತ್ತಾರೆ. ಆದರೆ ಅದನ್ನು ಸೇದಬೇಡಿ ಎಂದು ಹೇಳುವುದಕ್ಕೆ ಧೈರ್ಯವಿಲ್ಲ. ಮಧ್ಯಪಾನ ಮಾಡಬಾರದೆಂದು ಸಂವಿಧಾನದಲ್ಲಿ ಹೇಳಿದೆ. ಆದರೆ ಅದರಲ್ಲಿ ಹಣ ಬರುತ್ತದೆಂದು ಮಧ್ಯಪಾನ ಮಾಡಬೇಡಿ ಎಂದು ಹೇಳುವುದಕ್ಕೆ ತಯಾರಿಲ್ಲ. ಹಣಕೋಸ್ಕರವಾಗಿ ಜನರಿಗೆ ಮಧ್ಯಪಾನ ಮಾಡಿಸಿ ಅವರ ಆರೋಗ್ಯ ಕೆಡಿಸಿ, ಬುದ್ಧಿ ಕೆಡಿಸಿ ಹರಿಜನಗಿರಿಜನರ ಮತ್ತು ಹಿಂದುಳಿದ ವರ್ಗದವರ ಹಿತ ರಕ್ಷಣೆ ಮಾಡುತ್ತೇವೆಂದು ಹೇಳುತ್ತಾರೆ. ಅವರನ್ನು ಅನೀತಿ ಮಾರ್ಗದಲ್ಲಿ ಕೊಂಡೊಯ್ಯುತ್ತಿದ್ದಾರೆ. ಅವರಿಗೆ ಮಧ್ಯಪಾನ ಮಾಡಿಸಿ ಹಣ ವಸೂಲು ಮಾಡುತ್ತಿದ್ದಾರೆ. ಅವರ ಮೇಲೆ ತೆರಿಗೆ ಹಾಕಿ ಅವರಿಂದ ಹಣವನ್ನು ವಸೂಲು ಮಾಡುತ್ತಿದ್ದಾರೆ. ರಾಷ್ಟ್ರದ ಜನರ ನಡತೆಯನ್ನು ಮತ್ತು ಆರೋಗ್ಯವನ್ನು ಕೆಡಿಸಿದ್ದಾರೆ. ಈ ರೀತಿ ಇವರು ರೊಕ್ಕ ಸಂಪಾದನೆ ಮಾಡಿ ರಾಜ್ಯದ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಇವರು ರಾಷ್ಟ್ರದ ಜನಗಳಿಗೆ ನೀರುಕುಡಿಸಿ, ನಡತೆ ಕೆಡಿಸಿ, ಆರೋಗ್ಯ ಕೆಡಿಸಿ ಪ್ರೋಗ್ರೆಸ್ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಈ ಸರ್ಕಾರದ ಆಡಳಿತದಲ್ಲಿ ಕಳ್ಳಸಾಗಾಣಿಕೆ, ಬ್ಲಾಕ್ ಮಾರ್ಕೆಟ್, ಭ್ರಷ್ಟಚಾರ ಲಂಚಗುಳಿತನ ಎಲ್ಲವೂ ನಡೆಯುತ್ತದೆ. ಇವತ್ತು ಯಾವುದೇ ಒಂದು ಇಲಾಖೆಯನ್ನು ತೆಗೆದು

ಕೊಂಡರೂ ಪೋಲೀಸ್, ಪಬ್ಲಿಕ್ ವರ್ಕ್ಸ್, ಎಜುಕೇಷನ್, ಸೆಂಟ್ ಪರ್ಸೆಂಟ್ ಲಂಚಗುಳಿತನ ಇದೆ. ಸಿಗರೇಟ್ ಸೇದಿಸಿ, ಹೆಂಡ ಕುಡಿಸಿ, ಚಾರಿತ್ರ್ಯ ಕೆಡಿಸಿ ಆರೋಗ್ಯ ಕೆಡಿಸಿ ರೊಕ್ಕ ಸಂಪಾದನೆಯ ಪ್ರೋಗ್ರೆಸ್ ಮಾಡಿದ್ದಾರೆ. ದೇಶದ ಹಿತದೃಷ್ಟಿಯಿಂದ, ರಾಷ್ಟ್ರದ ಹಿತದೃಷ್ಟಿಯಿಂದ, ನಾನು ಈ ಆರೋಪವನ್ನು ಮಾಡುತ್ತಿದ್ದೇನೆ. ಈ ಸರಕಾರದ ಆಡಳಿತದಲ್ಲಿ ಲಂಚದ ಅವಾಂತರ ಜಾಸ್ತಿಯಾಗಿದೆ. ಯಾವುದೇ ಇಲಾಖೆಗೆ ಎಂ. ಎಲ್. ಎ ಗಳು ಪತ್ರ ಬರೆದರೆ ಉತ್ತರ ಬರುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದರೂ ಉತ್ತರ ಬರುತ್ತಿಲ್ಲ. ಸರ್ಕಾರದಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ದೇಶದಲ್ಲಿ ಅರಾಜಕತ ಉಂಟಾಗಿದೆ ಎಲ್ಲಿ ನೋಡಿದರು ಲಂಚಗುಳಿತನ ತುಂಬಿ ತುಳುಕಾಡುತ್ತಿದೆ. ಇದರ ಬಗ್ಗೆ ತಮಗೆ ಬೇಕಾದರೆ ಹತ್ತಲ್ಲ ನೂರು ಉದಾಹರಣೆ ಬೇಕಾದರೆ ಕೊಡುತ್ತೇನೆ. ದೇಶವಲ್ಲಿ ಯಾವುದಾದರೂ ಒಂದು ಕೊಲೆ ಆಯಿತು ಎಂದರೆ ಪೋಲೀಸ್ ಆಫೀಸರಿಗೆ ಒಂದು ಬಂಗಲೆ ಬಂತು ಎಂದು ಅರ್ಥ. ಹತ್ತು ಸಾವಿರ, ಇಪ್ಪತ್ತು ಸಾವಿರಾ ರೂಪಾಯಿ ಲಂಚ ತೆಗೆದುಕೊಂಡು ತಪ್ಪಿತಸ್ಥರನ್ನು ಬಿಡುಗಡೆ ಮಾಡುತ್ತಾರೆ. ಈ ರೀತಿಯಾಗಿ ಇಡೀ ದೇಶದಲ್ಲಿ ಲಂಚಾವತಾರ ನಡೆದಿದೆ. ಬಡ್ಜೆಟ್ ನಲ್ಲಾಗಲ್ಲಿ ರಾಜ್ಯಪಾಲರ ಭಾಷಣದಲ್ಲಾಗಲಿ, ಮದ್ಯಪಾನವನ್ನು ನಿಷೇಧಮಾಡತಕ್ಕ ವಿಚಾರವನ್ನು ಮಾಡಿಲ್ಲ. ಇವತ್ತಿನ ಸರ್ಕಾರ ಲಂಚಕೋರ ಸರ್ಕಾರ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಕಳ್ಳಸಾಗಾಣಿಕೆ, ಕಳ್ಳವ್ಯಾಪಾರ ಮತ್ತು ಲಂಚಕೋರ ಸರ್ಕಾರವಿದೆಂದು ಹೇಳಬಹುದು. ಶ್ರೀಮತಿ ಇಂದಿರಾಗಾಂಧಿಯವರ ಬಂಧನದ ಕಾಲದಲ್ಲಿ ಬೆಂಗಳೂರು ನಗರ ಮತ್ತು ಬಾಗಲಕೋಟೆಯಲ್ಲಿ ಲಾ ಅಂಡ್ ಆರ್ಡರ್ ಯಾವ ರೀತಿ ಮೇಂಟೆನ್ ಮಾಡಿದ್ದಾರೆಂಬದು ತಮಗೆಲ್ಲಾ ಗೊತ್ತಿದೆ. ಇದರಲ್ಲಿ ಸರ್ಕಾರ ಯಾವ ರೀತಿ ಪಾತ್ರ ವಹಿಸಿದೆ ಎಂಬುದು ತಮಗೆಲ್ಲಾ ಗೊತ್ತಿದೆ. ಲೂಟಿ ಗೂಂಡಾಗಿರಿ ಎಲ್ಲಾ ನಡೆದಿದೆ. ಲಕ್ಷಾಂತರ ರೂಪಾಯಿಗಳ ಲೂಟಿ ನಡೆದಿದೆ. ಈ ಸಭೆಯಲ್ಲಿ ವಿರೋಧಪಕ್ಷದವರು ನಾವೆಲ್ಲರೂ ಬಂದು ಆ ಬಗ್ಗೆ ನ್ಯಾಯಾಂಗ ವಿಚಾರಣೆಯಾಗಬೇಕೆಂದು ನಮ್ಮ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಾಗ ೬೦ ಮಂದಿ ವಿರೋಧಪಕ್ಷದ ಸದಸ್ಯರನ್ನು ಸಸ್ಪೆಂಡ್ ಮಾಡಿದರು. ಇದು ಪ್ರಜಾಪ್ರಭುತ್ವವನ್ನು ನಡೆಸತಕ್ಕ ರೀತಿಯೇ ?.

ಆದುದರಿಂದ ಪ್ರಜಾಪ್ರಭುತ್ವವನ್ನು ಕೊಲೆಮಾಡುವ ಸರ್ಕಾರ ಎಂದು ನಾನು ಹೇಳುತ್ತೇನೆ. ಹಿಂದಿನ ಅಧಿವೇಶನದಲ್ಲಿ ನ್ಯಾಯಾಂಗ ತನಿಖೆ ಮಾಡಬೇಕು ಎನ್ನುವ ವಿಚಾರ ಬಂದಾಗ ಸರ್ಕಾರದ ಧೋರಣೆ ಬದಲಾಯಿಸಲಿಲ್ಲ ಈ ಅಧಿವೇಶನ ನಾಲ್ಕು ದಿವಸ ನಡೆದರೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ಅಂಥವುದರಲ್ಲಿ ಈ ಅಧಿವೇಶನ ಸಮಯದಲ್ಲಿ ನ್ಯಾಯಾಂಗ ತನಿಖೆಯಾಗಬೇಕು ಎಂದು ಕೇಳಿದಾಗ ಈ ಬೇಡಿಕೆಯನ್ನು ಒಪ್ಪಲಿಕ್ಕೆ ಸರ್ಕಾರ ತಯಾರಿಲ್ಲ ಲೂಟಿ ಡಾಕಾ ಏನು ಮಾಡಿದಿರಿ ಅದಕ್ಕೆ ಪರಿಹಾರ ಕೊಡಬೇಕು ಎಂದು ಕೇಳಿದಾಗ ಅದಕ್ಕೆ ಸರ್ಕಾರ ವಿಚಿತ್ರವಾದ ಧೋರಣೆಯನ್ನು ತಾಳಿತು. ಗೂಂಡಾಗಿರಿ ನಡೆದ ಸ್ಥಳಗಳಲ್ಲಿ ಗರೀಬರಿದ್ದಾರೆ. ಸಜ್ಜನರು ಇದ್ದಾರೆ ಗೂಂಡಾಗಿರಿ ನಡೆಯುವಾಗ ಅವರು ತಮ್ಮ ತಮ್ಮ ಮನೆಯ ಬಾಗಿಲುಗಳನ್ನು ಮುಚ್ಚಿ ಈ ಗೂಂಡಾಗಿರಿ ಸರ್ಕಾರ ಬದಲಾವಣೆಯಾಗಲಿ ಗೂಂಡಾಗಿರಿ ನಿಲ್ಲಲಿ ಎಂದು ದೇವರನ್ನು ಪ್ರಾರ್ಥಿಸಿದರು. ಅಂಥಾ ಜನರಿಗೆ ಇವತ್ತು ನೀವು ಪ್ಯೂನೇಟೀವ್ ಟ್ಯಾಕ್ಸನ್ನು ಹಾಕಲಿಕ್ಕೆ ಹೊರಟಿದ್ದೀರಿ. ಇಂತಹ ಟ್ಯಾಕ್ಸ್ ನಿಜಾಮರ ಕಾಲದಲ್ಲಿ ಇತ್ತು. ಸರ್ಕಾರದ ಅಯೋಗ್ಯತೆಯಿಂದಾಗಿ ಇವತ್ತು ಪ್ಯೂನೇಟೀವ್ ಟ್ಯಾಕ್ಸ್ ಹಾಕಲಿಕ್ಕೆ ಹೊರಟಿದ್ದಾರೆ. ಇಂಥಾ ಪ್ಯೂನೇಟೀವ್ ಟ್ಯಾಕ್ಸ್ ಹಾಕತಕ್ಕಂಥ ಸರ್ಕಾರವನ್ನು ನಾನು ಧಿಕ್ಕಾರ ಮಾಡುತ್ತೇನೆ.

ಇನ್ನು ನ್ಯಾಯಾಲದ ಬಗ್ಗೆ ಹೇಳಬೇಕಾಗಿದೆ. ಕಾನ್‌ಸ್ಟಿಟ್ಯೂಷನ್‌ನಲ್ಲಿ ಲೆಜಿಸ್ಲೇಚರ್, ಜುಡಿಶಿಯರಿ ಮತ್ತು ಎಗ್ಸಿಕ್ಯೂಟೀವ್ ಇದೆ. ಈ ಜುಡಿಶಿಯರಿ ಒಂದು ಅಂಗ. ಇವತ್ತು ಲೆಜಿಸ್ಲೇಚರ್ ಎಗ್ಸಿಕ್ಯೂಟೀವನ್ನು ಕಂಟ್ರೋಲ್ ಮಾಡುತ್ತಾ ಇದೆ. ಇದು ನನ್ನ ಅನುಭವ. ಇವತ್ತು ಎಗ್ಸಿಕ್ಯೂಟೀವ್‌ಗೆ ಸಮಾಧಾನ ಇಲ್ಲ. ಎಗ್ಸಿಕ್ಯೂಟಿವ್‌ಗೆ ಬೇರೆ ಅಂಗಗಳ ಬಗ್ಗೆ ಸಮಾಧಾನ ಇಲ್ಲ. ಜುಡಿಶಿಯರಿ ಬಗ್ಗೆ ಗೌರವ ಇಲ್ಲ ಒಂದೊಂದು ಜಡ್ಜ್‌ಮೆಂಟ್ ಬಂದರೆ, ಅದಕ್ಕೆ ಒಂದೊಂದು ಆರ್ಡಿನೆನ್ಸ್. ಈ ಆರ್ಡಿನೆನ್ಸ್ ಸರಿಯಿಲ್ಲ ಎಂದು ಮತ್ತೊಂದು ಆರ್ಡಿನೆನ್ಸ್. ಹೀಗಾಗಿ ಎಕ್ಸಿಕ್ಯೂಟೀವ್ ಇವತ್ತು ನಾವೇ ಸಾವರಿನ್ ಎಂದು ತೋರಿಸುತ್ತಾ ಇದೆ. ಒಬ್ಬ ಜವಾಬ್ದಾರಿ ಮಂತ್ರಿಗಳು ಒಬ್ಬ ನ್ಯಾಯಾಧೀಶರಿಗೆ ಈ ಪ್ರಕಾರ ಟ್ರೆಂಡ್ ಇರಬೇಕು, ಇದು ಆಗದೇ ಹೋದರೆ ಬಹಳ ತೊಂದರೆಯಾಗುತ್ತದೆ ಇರುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳತಕ್ಕವರು ಇವತ್ತು ಸರ್ಕಾರ ನಡೆಸುತ್ತಾ ಇದ್ದಾರೆ. ಸರ್ಕಾರ ನ್ಯಾಯಾಲಯದ

ಬಗ್ಗೆ ಅಗೌರವ ಮಾಡಿ, ನ್ಯಾಯಾಲಯವನ್ನು ಈ ಒಂದು ಪ್ರಕಾರವಾಗಿ ಕಂಟ್ರೋಲ್ ಮಾಡುವ ಪರಿಸ್ಥಿತಿಯಲ್ಲಿದೆ. ಆದುದರಿಂದ ಸರ್ಕಾರ ಜುಡಿಶಿಯರಿಯನ್ನು ಕಂಟೆಂಪ್ಟ್ ಆಗತಕ್ಕ ರೀತಿಯಲ್ಲಿ ಮಾಡುತ್ತಾ ಇದೆ ಎಂದು ನಾನು ಹೇಳುತ್ತೇನೆ.

ಹೈದರಾಬಾದ್–ಕರ್ನಾಟಕ ಭಾಗದ ಸದಸ್ಯರು ಇರ್ರೆಸ್ಪೆಕ್ಟೀವ್ ಆಫ್ ದಿ ಪಾರ್ಟೀಸ್ ನಾವು ೧೦ ವರ್ಷಗಳಿಂದ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದೇವೆ. ತೆಲಂಗಾಣ ರೀಜನಲ್ ಡೆವಲಪ್ ಮೆಂಟ್ ಪ್ರಕಾರ ನಮಗೆ ನ್ಯಾಯವಾದ ಋಣವನ್ನು ಸರಿಯಾಗಿ ಹಂಚಬೇಕು ಎಂದು ಕೇಳುತ್ತಾ ಇದ್ದೇವೆ. ಉದಾಹರಣೆಗೆ ಕಾರಂಜ ಪ್ರಾಜೆಕ್ಟ್ ಬೀದರ್‌ನಲ್ಲಿದೆ. ಅದನ್ನು ೭ ವರ್ಷಗಳಲ್ಲಿ ಕಂಪ್ಲೀಟ್ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟು ಎರಡು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಅದಕ್ಕೆ ೩೮ ಕೋಟಿ ರೂಪಾಯಿಗಳಾಗುತ್ತದೆ. ಎರಡು ಕೋಟಿ ರೂಪಾಯಿಗಳನ್ನು ಒದಗಿಸುವುದು ಖರ್ಚುಮಾಡುವುದು ಮಾತ್ರ ೭೨ ಲಕ್ಷ. ಹೋದ ವರ್ಷ ೨ ಕೋಟಿ ೫೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ನಿಮ್ಮ ಅಧಿಕಾರಿಗಳ ಕ್ರಿಮಿನಲ್ ನೆಗ್ಲಿಜೆನ್ಸ್‌ನಿಂದ ಒಂದು ಕೋಟಿ ರೂಪಾಯಿಗಳು ಲ್ಯಾಪ್ಸ್ ಆಯಿತು. ಈ ವರ್ಷ ಹೋದವರ್ಷ ಒಂದು ಕೋಟಿ ರೂಪಾಯಿ ಲ್ಯಾಪ್ಸ್ ಆದರೆ ಈ ವರ್ಷ ಒಂದು ಕೋಟಿ ೫೦ ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗುತ್ತದೆ. ಏಕೆಂದರೆ ಇವರಿಂದ ಆಗುವುದಿಲ್ಲ. ಈ ಜನರಿಗೆ ಆಡಳಿತ ನಡೆಸಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಈ ಪ್ರಾಜೆಕ್ಟ್ ಏನಿದೆ, ಅದು ಎಲ್ಲಕ್ಕಿಂತ ಬ್ಯಾಕ್‌ವರ್ಡ್ ಏರಿಯ, ಅಲ್ಲಿ ನೀರಿಗೆ ಬಹಳ ತೊಂದರೆ ಇದೆ, ನೀರಿಗೆ ಅಭಾವಇದೆ. ಅಲ್ಲಿ ೧೯೭೩–೭೪ ರಲ್ಲಿ ಭಯಂಕರ ದುಷ್ಕಾಲ ಬಂತು. ಜನರು ನೀರಿಗಾಗಿ ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಇದಕ್ಕೆ ನೀವು ಖರ್ಚು ಮಾಡಿದ ಹಣ ದಲ್ಲಿ ಒಂದು ಕೋಟಿ ರೂಪಾಯಿ ನಿಮ್ಮ ಆಫೀಸರರ ಮತ್ತು ಸಿಬ್ಬಂದಿಗೆ ಖರ್ಚಾಗಿರಬಹುದು. ೫೦ ಲಕ್ಷ ಖರ್ಚು ಮಾಡುವುದಕ್ಕೆ ೬ ಕೋಟಿ, ೭ ಕೋಟಿ, ೮ ಕೋಟಿ ಬೇಕು ಎಂದು ಹೇಳುತ್ತಾಇದ್ದಾರೆ. ಖರ್ಚು ಈ ಪ್ರಕಾರವಾಗಿ ನಡೆಯುತ್ತಾ ಇದೆ. ಈಗ ನೀವು ಈ ಯೋಜನೆಗಳನ್ನು ಮಾಡಲಿಕ್ಕೆ ಹಣ ಸಾಲುವುದಿಲ್ಲ ಎಂದು ಟ್ಯಾಕ್ಸನ್ನು ಹೆಚ್ಚಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಹೆವಿ ಟ್ಯಾಕ್ಸ್ ಹಾಕಿ ಜನರನ್ನು ಹೀನಗತಿಗೆ ಇಳಿಸುತ್ತಿದ್ದೀರಿ.

ಇನ್ನು ಡ್ರಿಂಕಿಂಗ್ ವಾಟರ್ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇವತ್ತು ದೇಶದಲ್ಲಿ. ಶೇಕಡ ೮೦ ಭಾಗ ಗರೀಬಿ ಜನರಿದ್ದಾರೆ. ರೈತರಿದ್ದಾರೆ. ಬೀದರ್ ಜಿಲ್ಲೆಯ ಔರತಕ್ಕ ೬೦೦ ಹಳ್ಳಿಗಳ ಪೈಕಿ ೪೮೦ ಹಳ್ಳಿಗಳಲ್ಲಿ ನೀರಿಲ್ಲ ಎಂದು ಸರ್ಕಾರದ ರಿಕಾರ್ಡ್‌ನಲ್ಲಿದೆ. ಇಡೀ ದೇಶದಲ್ಲಿರತಕ್ಕ ೬೬,೦೦೦ ಹಳ್ಳಿಗಳ ಪೈಕಿ ೧೫,೦೦೦ ಹಳ್ಳಿಗಳಿಗೆ ನೀರು ಬಂದಿಲ್ಲ. ಸ್ವಾತಂತ್ರ್ಯ ಬಂದು ೩೦ ವರ್ಷವಾದರೂ ಎಲ್ಲಾ ಹಳ್ಳಿಗಳಿಗೆ ನೀರನ್ನು ಕೊಡಲಿಕ್ಕೆ ಆಗಲಿಲ್ಲ. ಬೆಂಗಳೂರಿನಲ್ಲಿನಂಥ ಪಟ್ಟಣಗಳಲ್ಲಿ ಇರತಕ್ಕ ವೈಟ್ ಹೌಸ್‌ಗಳಲ್ಲಿ ಜನರು ಏನು ಶರಾಬು ಕುಡಿಯುತ್ತಾರೆ. ಅಷ್ಟು ನೀರೂ ಕೂಡ ನಮ್ಮ ಕಡೆ ಸಿಕ್ಕುವುದಿಲ್ಲ. ಹಳ್ಳಿಗಳಲ್ಲಿ ನೀರಿನ ಅಭಾವ ಒಂದೊಂದು ವರ್ಷಕ್ಕೂ ಎರಡು ಪಟ್ಟು, ಮೂರು ಪಟ್ಟು ಜಾಸ್ತಿಯಾಗುತ್ತಾ ಹೋಗುತ್ತಿದೆ. ಒಂದು ವರ್ಷದಲ್ಲಿ ಸರಿ ಮಾಡುತ್ತೇವೆ ಎಂದು ಹೇಳುತ್ತೀರಿ, ಆದರೆ ನೀವು ಮಾಡುವುದು ಸಮಾಧಿ. ಇವತ್ತು ಜನರಿಗೆ, ನೀರು ಸಿಗಬಾರದು, ಊಟ ಸಿಗಬಾರದು, ಅನ್ನ ಸಿಗಬಾರದು, ಆದರೆ ಅವರು ಟ್ಯಾಕ್ಸ್ ಕೊಡುವುದಕ್ಕೆ ಪ್ರಿಪೇರ್ ಆಗಬೇಕು. ಅವರು ಮನೆ ಮಠ ಮಾರಿ ಟ್ಯಾಕ್ಸ್ ಕೊಟ್ಟು ಇವತ್ತು ಭಿಕ್ಷೆ ಬೇಡುತ್ತಿದ್ದಾರೆ. ಅವರ ದುಃಖವನ್ನು ದೂರ ಮಾಡುವ ಪರಿಸ್ಥಿತಿ ಮಾತ್ರ ಇಲ್ಲ ! ದುಃಖವನ್ನು ದೂರಮಾಡುವ ಇಚ್ಛೆಯು ಸರ್ಕಾರಕ್ಕೆ ಇಲ್ಲ.

ಇನ್ನು ಪೋಲೀಸ್ ಇಲಾಖೆಯವರು ಯಾವರೀತಿ ಬಿಹೇವಿಯರ್ ಮಾಡುತ್ತಾಇದ್ದಾರೆ ಎನ್ನುವುದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ಮೊನ್ನೆ ಫೇಮಸ್ ಗಾಂಧಿಯನ್ ಅಣ್ಣಾ ಗುರೂಜಿ ಮತ್ತು ಹುಕ್ಕೇರಿ ಕಾಳಪ್ಪ ಅವರು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಬೇಕು ಎಂದು ಹೋದಾಗ ಅವರನ್ನು ಅರೆಸ್ಟ್ ಮಾಡಿದ್ದಾರೆ. ಮೊದಲು ಅರೆಸ್ಟ್ ಮಾಡಿಸುವುದು, ಆಮೇಲೆ ನಮಗೆ ಗೊತ್ತಿಲ್ಲ ಎಂದು ಹೇಳುವುದು ಇವರ ನೀತಿಯಾಗಿದೆ. ಇವರು ಹೇಳುವುದು ಒಂದು ಮಾಡುವುದು, ಇಂಥಾದ್ದು ಇವರ ನೀತಿಯಾಗಿದೆ.

ಇನ್ನು ೨೦ ಅಂಶಗಳ ಕಾರ್ಯಕ್ರಮದ ಬಗ್ಗೆ ಹೇಳಬೇಕು. ಈ ೨೦ ಅಂಶಗಳ ಕಾರ್ಯಕ್ರಮಗಳ ಬಗ್ಗೆ ಹೇಳಬೇಕಾದರೆ ೨೦ ಗಂಟೆಗಳು ಬೇಕು. ಇವುಗಳಲ್ಲಿ ಎಲ್ಲವನ್ನೂ ಹೇಳಲಿಕ್ಕೆ ಹೋಗದೆ ನಾಲ್ಕೈದು ಅಂಶಗಳ ಬಗ್ಗೆ ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲನೆಯದು, ಜಾತ್ಯಾತೀತ ರಾಷ್ಟ್ರದಲ್ಲಿ ಜಾತಿಯ ಭೇದ ಮಾಡುತ್ತಾ ಬಂದಿದ್ದೀರಿ. ಇದು ನಾಚಿಕೆಗೇಡಿನ ಮಾತು.

ಶ್ರೀ ಎಸ್.ಎಂ. ಯಾಹ್ಯಾ :—ತಾವು ಉರ್ದು ಭಾಷೆಯಲ್ಲಿ ಚನ್ನಾಗಿ ಹೇಳುತ್ತೀರಿ, ಹೇಳಿ.

ಶ್ರೀ ಭೀಮಣ್ಣ ಖಂಡ್ರೆ :—ನಾನು ಉರ್ದುವಿನಲ್ಲಿ ಹೇಳಿದರೆ ಮತ್ತೆ ಅದನ್ನು ಕನ್ನಡಕ್ಕೆ ಟ್ರಾನ್ಸ್ಲೇಷನ್ ಮಾಡ ಬೇಕಾಗುತ್ತದೆ. ಇಲ್ಲದೇಹೋದರೆ ಎಲ್ಲರಿಗೂ ಅರ್ಥವಾಗುವುದಿಲ್ಲ. ಆದುದ ರಿಂದ ಕನ್ನಡದಲ್ಲಿ ಮಾತನಾಡುತ್ತೇನೆ. ಜಾತ್ಯಾತೀತ ರಾಷ್ಟ್ರದಲ್ಲಿ ಜಾತಿಯ ವಿಷಯವನ್ನ ಬೀರುತ್ತಿದ್ದೀರಿ, ಇದನ್ನು ತಮ್ಮ ಮುಂದೆ ನಾನು ಇಡುತ್ತಿದ್ದೇನೆ. ೧೯೪೭ನೇ ಇಸವಿಗೆ ಮೊದಲು ಭಾರತ ಖಂಡವಲ್ಲಿ ಹಿಂದು ಮುಸ್ಲಿಂ ಎರಡು ಜಾತಿ ಇತ್ತು. ನಂತರ ಭಾರತ ಮಾತೆಯ ತುಕಡಿ ಅಂದರೆ ಅಖಂಡ ಭಾರತವನ್ನು ಖಂಡಮಾಡಿ ಒಂದು ಅಂಗವನ್ನು ಪಾಕಿಸ್ತಾನ ಎಂದು ಕೇಳಿ ಮುಸ್ಲಿಮರಿಗೆ ಬಿಟ್ಟು ಬಿಟ್ಟರು ಆದರೂ ತಾತ್ವಿಕ ದೃಷ್ಟಿಯಿಂದ ಒಪ್ಪದೇಹೋದರೆ ಕಾರ್ಯದಲ್ಲಿ ಮಾತ್ರ ಒಪ್ಪಿದಿರಿ. ಇವತ್ತು ಇಲ್ಲೂ ನಾಲ್ಕಾರು ಕೋಟಿ ಮುಸ್ಲಿಮರು ಇದ್ದಾರೆ. ನಮ್ಮದು ಸಂವಿಧಾನದ ಪ್ರಕಾರ ರಚನೆಯಾ ರತಕ ದೇಶ. ಅವರು ಕೂಡ ಭಾರತ ಮಾತೆಯಲ್ಲಿ ಹುಟ್ಟಿದವರು, ಇದೇ ಭೂಮಿಯಲ್ಲಿ ಬೆಳೆದು, ಇದೇ ಭೂಮಿಯಲ್ಲಿ ಉಂಡು, ನೀರು ಕುಡಿದು ಬೆಳೆದು, ನಮ್ಮ ಅಣ್ಣತಮ್ಮಂದಿರಂತೆ ಇದ್ದಾರೆ. ನಮ್ಮ ದೇಶವಲ್ಲಿ ಮುಸ್ಲಿಮರು ಸುಪ್ರೀಂ ಕೋರ್ಟ್ ಜಡ್ಜ್ ಆಗಿದ್ದಾರೆ, ರಾಷ್ಟ್ರಪತಿಗಳಾಗಿದ್ದಾರೆ, ನಮ್ಮ ರಾಜ್ಯದಲ್ಲಿ ಶ್ರೀ ಮಾನ್ ಯಾಹ್ಯಾರವರು ಅರ್ಥ ಮಂತ್ರಿಗಳಾಗಿದ್ದಾರೆ. ಅವರೂ ನಮ್ಮ ಅಣ ತಮ್ಮಂದಿರು, ಭಾರತ ಮಾತೆಯ ಮಕ್ಕಳು ಎಂದು ನಾವು ತಿಳಿದುಕೊಂಡಿದ್ದೇವೆ.

೩–೩೦ ಪಿ. ಎಂ.

ಒಂದು ಪಾಕಿಸ್ಥಾನ ಮಾಡಿದ ಹಾಗೆ ೬೦೦ ಪಾಕಿಸ್ತಾನ ಮಾಡುತ್ತೀರಿ. ಶ್ರೀ ಹಾವನೂರ್‌ರವರು ರಿಪೋರ್ಟ್ ಕೊಟ್ಟಿದ್ದಾರೆ. ಅದರಂತೆ ಇವತ್ತು ಎಸ್.ಸಿ. ಮತ್ತು ಎಸ್.ಟಿ ಯವರನ್ನು ಮತ್ತು ಹಿಂದುಳಿದವರನ್ನು ಮೇಲೆತ್ತುವ ಸಲುವಾಗಿ ಸಮತಾವಾದದ ಸಲುವಾಗಿ ಕೆಲವು ಸೌಲಭ್ಯಗಳನ್ನು ಕೊಡಬೇಕೆಂದು ಹೇಳಿದ್ದಾರೆ ಅದರಂತೆ ಮಾಡಿ ಅಭ್ಯಂತರವೇನೂ ಇಲ್ಲ. ಆದರೆ ಇದರಿಂದ ೨೬ ಸಾವಿರ ಹಳ್ಳಿಗಳಲ್ಲಿ ಎಷ್ಟು ಜನರು ಇದ್ದಾರೋ ಅವರಲ್ಲಿ ಎಲ್ಲಾ ಜಾತಿಯ ಭಾವನೆಯನ್ನು ಬಿತ್ತಿದ ಹಾಗೆ ಆಗುವುದಿಲ್ಲವೇ ? ಎಂದು ನಾನು ಕೇಳುತ್ತೇನೆ. ಇವತ್ತು ಹರಿಜನರು ಗಿರಿಜನರು ಹಿಂದುಳಿದವರು ಮುಂದೆ ಬರಲಿ, ಅವರು ಮುಂದೆ ಬರಲು ಬೇಡವೆಂದು ಹೇಳುವುದಿಲ್ಲ. ಆದರೆ ಯಾವ ಪ್ರಕಾರ ಮುಂದೆ ಬರಲು ಅವಕಾಶ ಮಾಡಿಕೊಟ್ಟಿದ್ದೀರಿ ಎಂಬುದನ್ನು ನೋಡಿದರೆ ಭಯವಾಗುತ್ತಿದೆ. ಇದರಿಂದ ನಮ್ಮ ದೇಶದಲ್ಲಿ ೬೦೦ ಜಾತೀಯ ಖಂಡಗಳನ್ನು ಮಾಡಲು ಹೊರಟಿದ್ದೀರಿ ಎನ್ನುವ ಭಯ ಉಂಟಾಗುತ್ತಿದೆ. ಇದರಿಂದ ಮುಸ್ಲೀಮರಿಗೇ ಒಂದು ಖಂಡ ಲಿಂಗಾಯಿತರಿಗೇ ಒಂದು ಖಂಡ, ಬ್ರಾಹ್ಮಣ ಜಾತಿಯವರಿಗೇ ಒಂದು ಖಂಡ ಒಕ್ಕಲಿಗರಿಗೇ ಒಂದು ಖಂಡ ಹೀಗೆ ಭಾರತ ಭೂಮಿಯನ್ನೇ ೬೦೦ ಖಂಡಗಳನ್ನಾಗಿ ತುಕಡಿ ಮಾಡಲು ಹೊರಟಿದ್ದೀರಿ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇವತ್ತು ಒಬ್ಬ ಸ್ಟೂಡೆಂಟ್ ಮೆಡಿಕಲ್ ಕಾಲೇಜಿಗೋ ಅಥವಾ ಇಂಜಿನಿಯರಿಂಗ್ ಕಾಲೇಜಿಗೋ ಸೇರಬೇಕಾದರೆ ಅವನಿಗೆ ಶೇಕಡ ೬೫ ಬಂದಿದ್ದರೂ ಅವನಿಗೆ ಸೀಟು ಸಿಗಬೇಕಾದರೆ ಜಾತಿಯೇ ಮುಖ್ಯವಾಗಿದೆ. ಏತಕ್ಕೆಂದರೆ ಅವನಿಗೆ ಮೊದಲು ಕೇಳುವ ಪ್ರಶ್ನೆಯೇ ನಿನ್ನ ಜಾತಿ ಯಾವುದು ? ಇದು ನಿಜವಾಗಿಯೂ ನಾಚಿಕೆ ವಿಷಯವಲ್ಲವೇ ? ಒಬ್ಬ ಮನುಷ್ಯ ಈ ದೇಶದಲ್ಲಿ ತಾನು ಸೀಟನ್ನು ಪಡೆಯಬೇಕಾದರೆ ಜಾತಿ ಮುಖ್ಯವಾಗಿದೆ. ಅವನು ಯಾವ ಜಾತಿ ಎಂದು ಕೇಳಿ ಅವನಿಗೆ ಸೀಟು ಕೊಡಬೇಕೆಂದು ನಮ್ಮ ಸಂವಿಧಾನದಲ್ಲಿ ಹೇಳಿದೆಯೇ ? ಇದು ನಮ್ಮ ರಾಷ್ಟ್ರದ ನೀತಿಯೇ ? ಇದರಿಂದ ರಾಷ್ಟ್ರದ ನೀತಿ ಬೆಳೆಯುತ್ತದೆಯೇ ? ಇದರಿಂದ ಬೇಸತ್ತ ಜನರು ನಕ್ಸಲೈಟ್ ಆಗುತ್ತಾರೆ, ನಕ್ಸಲೈಟ್ ಆಗಿ ಬಂದೂಕು ಹಿಡಿದು ನಿಮ್ಮ ತಲೆಯ ಮೇಲೇ ಕೂಡುವ ಪರಿಸ್ಥಿತಿ ಬಂದೀತು, ಇದರಿಂದ ನೀವು ರಕ್ತಕ್ರಾಂತಿಗೆ ಅವಕಾಶ ಮಾಡಿಕೊಡುತ್ತಿದ್ದೀರಿ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆ ನೀವು ಕೇವಲ ೪ ದಿವಸ ಅಧಿಕಾರದಲ್ಲಿರುವ ಸಲುವಾಗಿ ಈ ಪ್ರಕಾರ ಆ ಅನ್ಯಾಯ ಮಾಡಿ ದೇಶಕ್ಕೆ ಮೋಸ ಮಾಡಿ ರಾಷ್ಟ್ರದ್ರೋಹ ಮಾಡಿ, ರಾಷ್ಟ್ರದ ನೀತಿಯ ವಿರುದ್ಧ ಮಾಡುತ್ತಿದ್ದೀರಿ ಎಂಬುದು ಗೊತ್ತಾಗುತ್ತಿದೆ ನಮ್ಮ ದೇಶವಲ್ಲಿ ಕರ್‌ಪಷನ್ ನಡೆಯುತ್ತಿದೆ ಮತ್ತು ಸಮಯ ಬಂದರೆ ವಿರೋಧ ಪಕ್ಷದವರನ್ನೇ ಡಿಸ್‌ಮಿಸ್ ಮಾಡುವ ಅಧಿಕಾರ ಇಟ್ಟುಕೊಂಡಿದ್ದೀರಿ ಮತ್ತೆ ಇನ್ನು ಒಂದು ಸಂದರ್ಭದಲ್ಲಿ ಮಾನ್ಯ ಸದಸ್ಯರೊಬ್ಬರು ಸೂಟ್ ಮಾಡಿಸುವ ಪ್ರಸಂಗ ಬಂದರೆ ಶೂಟ್ ಕೂಡ ಮಾಡಿಸುತ್ತೇವೆಂದು ಹೇಳಿದ್ದರು ಇನ್ನೊಮ್ಮೆ ಆ ಪ್ರಸಂಗವನ್ನು ಬೇಕಾದರೆ ತಮಗೆ ಹೇಳುತ್ತೇನೆ. ಅದರ ಬಗ್ಗೆ ನಾನು ಇಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

ಇವತ್ತು ನಮ್ಮ ದೇಶದಲ್ಲಿ ಜಾತಿ ಆಧಾರದ ಮೇಲೆ ರಿಜರ್ವೇಷನ್ ಇಡಬೇಕೆಂದು ಹೇಳಿದ್ದೀರಿ. ನೌಕರಿ ಕೊಡಿ ಬೇಡವೆಂದು ಹೇಳುವುದಿಲ್ಲ ಆದರೆ ಇಂದು ನಮ್ಮ ದೇಶದಲ್ಲಿ ಗರೀಬರೇ ಹೆಚ್ಚಾಗಿರುವಾಗ ಹೇಗೆ ಭೇದ ಮಾಡುತ್ತೀರಿ ? ಗರೀಬರು ಗರೀಬರಲ್ಲಿ ತಾವು ಭೇದ ಭಾವನೆಯನ್ನು ತಂದಿಟ್ಟು ಅವರವರಲ್ಲಿ ಜಾತೀಯ ವಿಷವನ್ನು ಬಿತ್ತಿ ನಿಮ್ಮ ಮಕ್ಕಳು ಮೊಮ್ಮಕ್ಕಳಿಗೂ ಆಗುವಷ್ಟು ಹಣವನ್ನು ಮಾಡಿಟ್ಟುಕೊಳ್ಳುತ್ತಿದ್ದೀರಿ ಎನ್ನುವ ಆಕ್ಷೇಪಣೆ ಇದೆ. ಇವತ್ತು ನೀವು ಕೇವಲ ಓಟು ಪಡೆಯುವ ದೃಷ್ಟಿಯಿಂದ ಮನಸ್ಸಿಗೆ ಬಂದ ಹಾಗೆ ಮಾಡಿಕೊಂಡು ಹೋಗುವುದು ಸರಿಯಲ್ಲ ಆದುದರಿಂದ ತಾವು ಮಂತ್ರಿಗಳವರು ನಿಮ್ಮ ನಿಮ್ಮ ಕೋಣೆಯಲ್ಲಿ ಕುಳಿತಾಗಲೇ ನೀವೇ ಯೋಚಿಸಿ ನೋಡಿ ನೀವು ಮಾಡುತ್ತಿರುವುದು ಸರಿಯೋ ಎಂಬುದು ನಿಮಗೆ ಗೊತ್ತಾಗುತ್ತದೆ. ನಮ್ಮ ರಾಷ್ಟ್ರೀಯ ಭಾವೈಕ್ಯ ಎಲ್ಲಿಗೆ ಬಂದು ಮುಟ್ಟಿದೇ ಎಂಬುದು ನಿಮಗೆ ಗೋಚರವಾಗುತ್ತದೆ. ಇವತ್ತು ೯೦೦ ಜಾತಿಗಳಿಗೂ ಒಬ್ಬೊಬ್ಬರು ಜಡ್ಜ್‌ಗಳು ಇರಬೇಕೆಂದು ಮಾಡಲು ಹೊರಟಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ :— ಸ್ವಾಮಿ ಮಾನ್ಯ ಸದಸ್ಯರು ಮಾತನಾಡುವುದು ನೋಡಿದರೆ ನನಗೆ ಏನನ್ನಿಸುತ್ತದೆ ಎಂದರೆ ಒಂದೇ ಜಾತಿಯ ಜಡ್ಜ್ ಇರಬೇಕು ಅಂತಲೋ ಅಥವಾ ಎಲ್ಲ ಜಾತಿಯವರೂ ಇರಬೇಕೆಂತಲೋ ಅರ್ಥವಾಗುತ್ತಿಲ್ಲ ಅಥವಾ ಜಾತೀಯತೆ ನಮ್ಮ ಸಮಾಜದಲ್ಲಿ ಇಲ್ಲವೆಂದು ಅರ್ಥವೋ ?

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ಜಾತೀಗೂ ಜಾತಿಯತೆಗೂ ವ್ಯತ್ಯಾಸವಿದೆ. ಇವತ್ತು ಮುಸ್ಲಿಂರಲ್ಲಿ ತೆಗೆದುಕೊಂಡರೆ ಅವರು ನಮಾಜ್ ಬಿಡುವುದಿಲ್ಲ, ಲಿಂಗಾಯಿತರನ್ನು ತೆಗೆದುಕೊಂಡರೆ ನಾನು ಶಿವಪೂಜೆ ಮಾಡುವುದನ್ನು ಬಿಡುವುದಿಲ್ಲ, ಬ್ರಾಹ್ಮಣರನ್ನು ತೆಗೆದುಕೊಂಡರೆ ಅವರು ಬ್ರಾಹ್ಮಣತ್ವವನ್ನು ಬಿಟ್ಟುಕೊಡುವುದಿಲ್ಲ ಇದು ಜಾತಿ, ಆದರೆ ಜಾತೀಯತೆಯಲ್ಲಿ ಈ ಭಾವನೆ ಇರಕೂಡದು. ಒಬ್ಬ ಮನುಷ್ಯ ಕೆಲಸ ಮಾಡುವಾಗ ಅವನಲ್ಲಿ ಯಾವ ಜಾತೀಯ ಭಾವನೆ ಇರಕೂಡದು. ನಮ್ಮ ದೇಶದಲ್ಲಿ ಈ ಜಾತಿ ಆ ಜಾತಿ ಎನ್ನುವ ಭಾವನೆ ಹೋಗಬೇಕೆಂದು ಎಂದೇ ಡಾ. ಅಂಬೇಡ್ಕರ್‌ರವರು, ದಿ. ಮಹಾತ್ಮಾ ಗಾಂಧಿಯವರು, ಬಸವಣ್ಣನವರು ಹೇಳಿದ್ದಾರೆ. ಆದರೆ ನೀವು ಇವತ್ತು ಜಾತೀಯತೆಯ ವಿಷ ಬೀಜವನ್ನು ಬಿತ್ತಿದ್ದೀರಿ. ಆ ವಿಷ ಬೀಜವನ್ನು ಬಿತ್ತುವ ಕೆಲಸಕೆ ಹೋಗಬೇಡಿ ಎಂದು ಹೇಳುತ್ತೇನೆ. ಆ ರೀತಿ ಮಾಡಿದರೆ ೯೦೦ ಭಾಗಗಳನ್ನಾಗಿ ಮಾಡಬೇಕಾದ ಪರಿಸ್ಥಿತಿ ಬಂದೀತು ಎಂದು ಹೇಳಬಯಸುತ್ತೇನೆ.

ಇನ್ನು ಹರಿಜನರಿಗೆ ೧೪ ಪರ್ಸೆಂಟ್‌ನಿಂದ ೧೮ ಪರ್ಸೆಂಟ್‌ವರೆಗೆ ರಿಜರ್ವೇಷನ್ ಇರಬೇಕೆಂದು ಮಾನ್ಯ ಹಾವನೂರ್‌ರವರು ತಮ್ಮ ವರದಿಯಲ್ಲಿ ಹೇಳಿದ್ದಾರೆ ಅದಕ್ಕಾಗಿ ಸಂವಿಧಾನವನ್ನೂ ಕೂಡ ಬದಲಾಯಿಸಬೇಕೆಂದು ಹೇಳಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದು ೩೦ ವರ್ಷಗಳಾಗಿದ್ದರೂ ಕೂಡ ಇನ್ನೂ ನಾವು ಜಾತೀಯತೆಯ ವಿಷವನ್ನು ದೂರ ಮಾಡಲು ಆಗಿಲ್ಲ. ಈ ಜಾತಿಯ ವಿಷಯ ಹೇಳುವಾಗ ಮಾನ್ಯ ಶ್ರೀ ಯಾಹ್ಯಾರವರೇ ತಮ್ಮ ಬಡ್ಜೆಟ್ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ ಪೇಜ್ ೩೧ ರಲ್ಲಿ ಈ ಫ್ಯಾಮಿಲಿ ಪ್ರೊಗ್ರಾಂ ಬಗ್ಗೆ ಈ ರೀತಿಯಾಗಿ ಹೇಳಿದ್ದಾರೆ, "The programme which received a set back in the last year or two is now to be pushed ahead in the long term interests of the State relying for its success on a process of education and voluntary acceptance by the beneficiaries".

ಈ ರೀತಿ ಸೆಟ್ ಬ್ಯಾಕ್ ಆಗಿರುವುದಕ್ಕೆ ಕಾರಣವೇನು ? ಅದಕ್ಕೆ ಕಾರಣವೇನೆಂದರೆ ಅದು ಯಶಸ್ವಿಯಾಗದೇ ಇರಲು ಸರ್ಕಾರದ ನೀತಿಯೇ ಕಾರಣವಾಗಿದೆ. ಇವತು ಜನಸಂಖ್ಯೆ ೬೦ ಕೋಟಿ ಇದ್ದುದು ೧೨೦ ಕೋಟಿಯಾಗುತ್ತದೆ ಮುಂದೆ ಮನುಷ್ಯರನ್ನು ಮನುಷ್ಯರೇ ತಿನ್ನುವಂಥಾ ಕಾಲ ಬರುತ್ತದೆ. ಇದಕ್ಕೆ ನಮ್ಮ ಸರ್ಕಾರದ ಪಾಲಿಸಿಯೇ ಕಾರಣ. ಏತಕ್ಕೆಂದರೆ ಅವರವರು ತಮ್ಮ ತಮ್ಮ ಜಾತಿಯನ್ನೇ ಬೆಳಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಲಿಂಗಾಯಿತರು ತಮ್ಮ ಜಾತಿಯವರ ಸಂಖ್ಯೆ ಕಡಿಮೆಯಾಗುತ್ತಿದೆಂದು ಅವರಲ್ಲಿ ಈ ಫ್ಯಾಮಿಲಿ ಪ್ಲಾನಿಂಗ್ ಮಾಡಿಸಿಕೊಳ್ಳಲು ಬರುತ್ತಿಲ್ಲ. ಹೀಗೆಯೆ ಇನ್ನಿತರ ಜಾತಿಗಳವರೂ ಮುಂದೆ ಬರುತ್ತಿಲ್ಲ. ಮುಖ್ಯವಾಗಿ ಮುಸ್ಲೀಂರವರು ತಮ್ಮ ಧರ್ಮಕ್ಕೆ ಇದು ವಿರುದ್ಧವೆಂದು ಅವರು ಮುಂದೆ ಬರುತ್ತಿಲ್ಲ. ಆದರೆ ಇದರಿಂದ ನಮಗೆ ಫ್ಯಾಮಿಲಿ ಪ್ಲಾನಿಂಗ್ ಯಶಸ್ವಿಯಾಗದಿರುವ ಕಾರಣವೇನು ಎಂಬುದು ಅರ್ಥವಾಗುತ್ತದೆ. ಆದರೆ ಸರ್ಕಾರದವರು ತುರ್ತು ಪರಿಸ್ಥಿತಿಯ ಕಾಲದಲ್ಲಿ ಬೂಟ್ ಕಾಲಿನಿಂದ ಒದ್ದು ಬಡಿದು ಬಲಾತ್ಕಾರವಾಗಿ ಮಾಡಿಸಿದ್ದಾರೆ. ಒಂದೇ ದಿವಸದಲ್ಲಿ ೨ ಸಾವಿರದ ೧೫ ಜನರ ಫ್ಯಾಮಿಲಿಗೆ ಆಪರೇಷನ್ ಮಾಡಿದ್ದಾರೆಂದರೆ ಇದು ಪ್ರಪಂಚದಲ್ಲಿಯೇ

ಮೊದಲನೆಯದೆಂದು ಹೇಳಬಹುದಾಗಿದೆ. ಅಂಥಾ ವಿಕ್ರಮವನ್ನು ಆಗ ಸಾಧಿಸಿದ್ದಾರೆ ಇವತ್ತು ಹಾವನೂರ್‌ರವರು ಜಾಬ್ ರಿಜರ್ವೇಷನನ್ನು ಇಟ್ಟಿರುವಾಗ ನಮ್ಮ ಜಾತಿಯವರೂ ಮುಂದೆ ಬರಬೇಕಾದರೆ ನಮ್ಮ ನಮ್ಮ ಜಾತಿಯನ್ನು ಬೆಳೆಸಬೇಕು ಎನ್ನುವ ಭಾವನೆ ಜನರಲ್ಲಿ ಉಂಟಾಗಿರುವುದರಿಂದ ಇವತ್ತಿನ ದಿವಸ ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ಸೆಟ್ ಬ್ಯಾಕ್ ಉಂಟಾಗಿದೆ. ಇದರಿಂದ ನೀವು ಇದನ್ನು ಎಲ್ಲರಿಗೂ ಕಂಪಲ್‌ಸರಿಯಾಗಿ ಕಡಿದಿದ್ದರೆ ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ದೇಶದ ಜನಸಂಖ್ಯೆ ವಿಪರೀತವಾಗಿ ಹೆಚ್ಚಿ ಒಬ್ಬರನ್ನೊಬ್ಬರು ತಿಂದು ಬದುಕ ಬೇಕಾದ ಪರಿಸ್ಥಿತಿ ಬಂದೀತು ಆದುದರಿಂದ ಇನ್ನು ಮುಂದಾದರೂ ಸರ್ಕಾರದವರು ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಾರೆಂದು ನಂಬುತ್ತೇನೆ.

ನೀವು ಸಮಾಜವಾದೀ ರಾಷ್ಟ್ರದಲ್ಲಿ ಸಮಾಜವಾದಕ್ಕೆ ದ್ರೋಹ ಮಾಡುತ್ತಿದ್ದೀರಿ. ಇವತ್ತು ರಾಜ್ಯದಲ್ಲಿರುವ ೮೦ ಪರ್ಸೆಂಟ್‌ನಷ್ಟು ಮಂದಿ ರೈತರಿಗೆ ಎರಡು ಹೊತ್ತಿಗೆ ಸರಿಯಾಗಿ ಊಟ ದೊರಕುತ್ತಾ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ದೊಡ್ಡ ಶ್ರೀಮಂತರ ಮದುವೆ ಸಮಾರಂಭಗಳು, ಇತರ ಸಮಾರಂಭಗಳಿಗೆ ಹೋಗಿ ನೋಡಿದರೆ ಅನ್ನವನ್ನು ತಿನ್ನಲಾರದೆ ಬೀಸಾಡುತ್ತಿದ್ದಾರೆ. ಒಂದು ಕಡೆ ಶ್ರೀಮಂತ ಜನರು ಅಟ್ಟಹಾಸದಿಂದ ನಗುತ್ತಿದ್ದಾರೆ. ಇನ್ನೊಂದು ಕಡೆ ಬಡವರು ಒಂದು ಹೊತ್ತಿಗೆ ಊಟವಿಲ್ಲದೇ ನರಳುತ್ತಿದ್ದಾರೆ ಈ ತರಹ ಉದಾಹರಣೆಗಳನ್ನು ನಾನು ಸಾವಿರಾರು ಜಾಗಗಳಲ್ಲಿ ನೋಡಿದ್ದೇನೆ, ನೀವು ಸಹ ನೋಡಿದ್ದೀರಿ. ಪ್ರತಿಯೊಬ್ಬರೂ ನೋಡಿದ್ದಾರೆ. ಇಂತಹ ಸ್ಥಿತಿಯಲ್ಲಿ ಎಂ.ಎಲ್.ಎ. ಎಂ.ಎಲ್.ಸಿ.ಗಳಿಗೆ ಪೆನ್‌ಷನ್ ಕೊಟ್ಟು ಸಮಾಜವಾದೀ ಸರ್ಕಾರವನ್ನು ನಡೆಸುತ್ತಿದ್ದೇವೆಂದು ನೀವು ಹೇಳುತ್ತಿದ್ದೀರಿ. ಇದು ಸಮಾಜವಾದವೇ ? ಬಡವರು ಒಂದು ಹೊತ್ತಿಗಾದರೂ ತೃಪ್ತಿಯಿಂದ ಊಟ ಮಾಡುವುದಕ್ಕೆ ಅನುಕೂಲ ಮಾಡಿಕೊಡದೇ ಹೋದರೆ ಇದೂ ಒಂದು ಸಮಾಜವಾದವೇ ಎಂದು ಕೇಳಬಯಸುತ್ತೇನೆ. ದೇಶದಲ್ಲಿ ೮೦ ಪರ್ಸೆಂಟ್‌ನಷ್ಟು ಬಡಜನ ಏನಿದ್ದಾರೆ ಅವರಿಗೆ ಒಂದು ಹೊತ್ತಿಗೂ ಊಟ ಸಿಕ್ಕದೇ ಇರುವಾಗ ಎಂ.ಎಲ್.ಎ; ಎಂ.ಎಲ್.ಸಿ. ಗಳಿಗೆ ಅವರ ಆಯಸ್ಸು ಇರುವವರೆಗೆ ೩೦೦ ರಿಂದ ೫೦೦ ರೂಪಾಯಿಗಳವರೆಗೆ ಪೆನ್‌ಷನ್ ಕೊಟ್ಟಿರುವುದು ಸಮಾಜ ದ್ರೋಹದ ಕೆಲಸ ಎಂದು ಹೇಳುತ್ತೇನೆ. ಇದನ್ನು ನೀವು ವಾಪಸ್ ತೆಗೆದುಕೊಳ್ಳಬೇಕು. ನಾನು ರೈತರ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ರೈತರ ವಿಚಾರದಲ್ಲಿ ಎಷ್ಟು ಟ್ಯಾಕ್ಸ್ ಹಾಕಿದ್ದಾರೆ ಎಂಬುದನ್ನು ನೋಡಬೇಕು, ಇವತ್ತಿನ ಪರಿಸ್ಥಿತಿಯಲ್ಲಿ ಲ್ಯಾಂಡ್ ರೆವೆನ್ಯೂ ೧೨ ಪೈಸೆ ಇದೆ. ಎಜುಕೇಷನ್ ಸೆಸ್ ೨೦ ಪೈಸೆ ಇದ್ದುದು ೫೦ ಪೈಸೆ ಆಗಿದೆ. ಮಹಾರಾಷ್ಟ್ರದಲ್ಲಿ ಇದು ಹೆಚ್ಚಿಗೆ ಇಲ್ಲ. ನೀವು ಸೇಲ್ಸ್‌ಟ್ಯಾಕ್ಸ್ ೪ ಪರ್ಸೆಂಟ್ ಹಾಕಿದ್ದೀರಿ ಮಾರ್ಕೆಟ್ ಫೀ ೨ ರೂಪಾಯಿಗಳು ಎಂದು ಮಾಡಿದ್ದೀರಿ, ಇದು ಮಹಾರಾಷ್ಟ್ರದಲ್ಲಿ ೩೦ ಪೈಸೆ ಇದೆ. ಗೊಬ್ಬರದ ಮೇಲೆ ೩ ಪರ್ಸೆಂಟ್ ಟ್ಯಾಕ್ಸ್ ಹಾಕಿದ್ದೀರಿ. ಇದೆಲ್ಲವನ್ನೂ ರೈತರ ಮೇಲೆ ಏತಕ್ಕೆ ಹಾಕಬೇಕಾಗಿತ್ತು? ಈ ಎಲ್ಲಾ ಟ್ಯಾಕ್ಸ್‌ಗಳನ್ನೂ ರೈತರ ಮೇಲೆ ಹಾಕಿ, ಅವರ ರಕ್ತವನ್ನು ಹೀರಿ ಶಾಸಕರಿಗೆ ಪೆನ್‌ಷನ್ ಕೊಡಬೇಕೆಂದು ಮಾಡಿರುವುದು ರಾಷ್ಟ್ರದ್ರೋಹದ, ಸಮಾಜದ್ರೋಹದ ಕೆಲಸ ಎಂದು ಹೇಳದೇ ಗತ್ಯಂತರವಿಲ್ಲ. ಮೇಲೆ ಹೇಳಿದಂಥ ಟ್ಯಾಕ್ಸ್‌ಗಳಲ್ಲದೇ ಎಲೆಕ್ಟ್ರಿಕ್ ಚಾರ್ಜನ್ನು ಜಾಸ್ತಿ ಮಾಡಿದ್ದೀರಿ. ಇದು ನಮ್ಮಲ್ಲಿ ೨೪ ಪೈಸೆ ಇದೆ. ಇದು ಮದ್ರಾಸಿನಲ್ಲಿ ೧೨ ಪೈಸೆ ಇದೆ. ನೀವು ಅಲ್ಲಿಗಿಂತ ಇಲ್ಲಿ ಒಂದಕ್ಕೆ ಎರಡರಷ್ಟು ಚಾರ್ಜ್ ಹಾಕಿದ್ದೀರಿ. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಂಪ್‌ಸೆಟ್ಟುಗಳನ್ನು ಹೊಂದಿರತಕ್ಕಂಥ ರೈತರಿಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ನಾನು ಒಂದು ವಿಚಾರವನ್ನು ಹೇಳಬೇಕು ಎಂದರೆ ಮದ್ರಾಸಿನಲ್ಲಿ ಈ ಎಲೆಕ್ಟ್ರಿಕ್ ಚಾರ್ಜ್ ೧೨ ಪೈಸೆ ಇದ್ದುದನ್ನು ೬ ಪೈಸೆಯಷ್ಟು ಹೆಚ್ಚಿಸಿ ೧೮ ಪೈಸೆ ಎಂದು ಮಾಡಿದಾಗ ಒಂದು ಲಕ್ಷ ಮಂದಿ ಅಲ್ಲಿ ಸತ್ಯಾಗ್ರಹ ಮಾಡುವುದಕ್ಕೆ ತಯಾರಾದರು. ಅವರೆಲ್ಲರೂ ೬ ತಿಂಗಳಿಗೆ ಮೇಲ್ಪಟ್ಟು ಜೈಲಿಗೆ ಹೋದರು. ಅಷ್ಟಾದರೂ ಅವರು ಹೋರಾಟ ಮಾಡಿದಾಗ ಅಲ್ಲಿನ ಸರ್ಕಾರದವರು ೧೨ ಪೈಸೆಗೆ ಅದನ್ನು ನಿಗಧಿ ಮಾಡಿದ್ದಾರೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನೀವು ಈ ಬಗ್ಗೆ ಗಮನಹರಿಸಬೇಕು ಎಂದು. ಈಗ ವಾಟರ್ ರೇಟ್ ೮೦ ರೂಪಾಯಿಗಳು ಇದ್ದುದನ್ನು ೨೫೦ ರೂಪಾಯಿ ಎಂದು ಮಾಡಿದ್ದೀರಿ. ಬಜಾರಿನಲ್ಲಿ ಸಕ್ಕರೆ, ಹಣ್ಣುಹಂಪಲಗಳು, ಜೋಳ, ಗೋದಿ, ರಾಗಿ –ಇವುಗಳ ಬೆಲೆಗಳು ಕಡಿಮೆಯಾಗಿವೆ. ಇವುಗಳ ಬೆಲೆ ಕಡಿಮೆಯಾಗಿರುವಾಗ ನೀವು ಒಂದಕ್ಕೆ ೪ ಪಟ್ಟು ಹೆಚ್ಚಿಸಿ ೨೫೦ ರೂಪಾಯಿಗಳಿಗೆ ವಾಟರ್‌ರೇಟನ್ನು ನಿಗಧಿ ಮಾಡಿದ್ದೀರಿ. ಅಲ್ಲದೇ ಬೆಟರ್‌ಮೆಂಟ್ ಲೆವಿ ೫೦೦ ರೂಪಾಯಿ ಇದ್ದುದನ್ನು ೧,೫೦೦ ರೂಪಾಯಿಗಳಿಗೆ ಹೆಚ್ಚು ಮಾಡಿದ್ದೀರಿ. ಇವತ್ತಿನ ದಿವಸ ಇದೆಲ್ಲಾ ರೈತರಿಗೆ ಹೆಚ್ಚಿನ ಹೊರೆಯಾಗಿದೆ. ರೈತರು ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡರೆ ಆ ಹಣದ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಇಂಟರೆಸ್ಟ್ ಹಾಕುತ್ತಾರೆ. ಆ ಹಣ

ವನ್ನು ಸಕಾಲದಲ್ಲಿ ಕೊಡದಿದ್ದರೆ ಅದಕ್ಕೆ ಪೆನಾಲ್ಟಿ ಫೀ ಎಂದು ಬೇರೆ ಹಾಕುತ್ತಿದ್ದಾರೆ. ಹಳ್ಳಿಗಳಲ್ಲಿ ರೈತರಿಂದ ಈ ಹಣವನ್ನು ವಸೂಲಿ ಮಾಡುವಲ್ಲಿ ಹಣದ ಲೂಟಿ ನಡೆಯುತ್ತಿದೆ. ಹಳ್ಳಿಗಳಲ್ಲಿ ರೈತರು ಸತ್ತರೂ ಯಾರೂ ಕೇಳುವುದಿಲ್ಲ, ಅವರ ಮನೆಗಳಲ್ಲಿ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಹಿಟ್ಟು ಮಾಡಿ, ರೊಟ್ಟಿ ಮಾಡಿ ಮಕ್ಕಳಿಗೆ ಹಾಕುತ್ತಿದ್ದಾರೆ. ಅಂಥಾದರಲ್ಲಿ ಅವರ ಮನೆಯಲ್ಲಿ ಆಕಳು ಕರು ಹಾಕಿತು ಎಂದರೆ ಸಾಲದ ಹಣಕ್ಕಾಗಿ ಕರುವನ್ನೇ ಒಯ್ಯುತ್ತಿದ್ದಾರೆ. ಆಕಳು ಇದ್ದರೆ ಆಕಳನ್ನೇ ಒಯ್ಯುತ್ತಿದ್ದಾರೆ. ಅಲ್ಲಿ ಆಕಳನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ. ಆ ಕಡೆ ಆಕಳೂ ಸಾಯಬೇಕು, ಈ ಕಡೆ ರೈತನೂ ಸಾಯಬೇಕು ಇಂತಹ ಪರಿಸ್ಥಿತಿ ಬಂದಿದೆ. ಬ್ಯಾಂಕ್‌ನವರು ರೊಕ್ಕ ಕೊಟ್ಟರೆ ಅವುಗಳನ್ನು ಬಿಟ್ಟು ಕೊಡುತ್ತೇವೆ ಎಂದು ಹೇಳುತ್ತಾರೆ. ನಮ್ಮ ಬೀದರ್‌ನಲ್ಲಿ ಇಂತಹ ಎಷ್ಟೋ ಪ್ರಕರಣಗಳು ಆಗಿವೆ. ಅಲ್ಲಿ ನಾನು ಬಹಳ ದಿವಸಗಳ ಹಿಂದೆ ೪೦ ಸಾವಿರ ರೈತರ ಒಂದು ಪ್ರೊಸೆಷನ್ ಇಟ್ಟುಕೊಂಡಿದ್ದೆ. ರೈತರುಗಳೆಲ್ಲಾ ಸೇರಿ ಪ್ರೊಸೆಷನ್ ಮಾಡಿದ ಮೇಲೆ 'ಸಾಲದ ಹೊರೆಯಿಂದಾಗಿ ರೈತರು ಬಹಳ ಕಷ್ಟಪಡುತ್ತಿದ್ದಾರೆ, ಅವರ ಬೇಡಿಕೆಯನ್ನು ಪೂರೈಸಬೇಕು, ಅವರಿಗೆ ಆಶ್ರಯ ಕೊಡಬೇಕು' ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಯವರಿಗೆ ನಾವು ಅರ್ಜಿ ಕೊಟ್ಟಿದ್ದೇವೆ. ಅವರಿಂದ ಇಲ್ಲಿಯವರೆಗೆ ಏನೊಂದು ಉತ್ತರವೂ ಬರಲಿಲ್ಲ. ಮಾನ್ಯ ಮುಖ್ಯಮಂತ್ರಿಯವರಿಗೆ ರೈತರ ಪ್ರಾರ್ಥನೆಯ ಭಾಷೆ, ವಿನಂತಿಯ ಭಾಷೆ, ಕಾಗದದ ಭಾಷೆ ತಿಳಿಯಲಿಲ್ಲವೋ ಏನೋ ನನಗೆ ಗೊತ್ತಾಗಲಿಲ್ಲ. ಅದಕ್ಕೆ ಇನ್ನೂ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟಿಲ್ಲ. ಅದರ ಬಗ್ಗೆ ಅವರು ವಿಚಾರ ಮಾಡಿಲ್ಲ. ಪರಿಸ್ಥಿತಿ ಹೀಗೆ ಇದ್ದರೆ ನಾವು ಮುಂದೆ ಸತ್ಯಾಗ್ರಹ ಮಾಡಬೇಕಾಗುತ್ತದೆ. ಈ ಸಭೆಯಲ್ಲಿ ಒಂದು ಮಾತನ್ನು ಹೇಳಬೇಕು ಎಂದರೆ ನಾವು ೪೦ ಸಾವಿರ ಮಂದಿ ರೈತರೊಡನೆ ಪ್ರೊಸೆಷನ್ ಮಾಡಿದಂಥ ವಿಚಾರ ಪೇಪರ್‌ನಲ್ಲಿ ಬರಲಿಲ್ಲ. ಇದು ಮಾನ್ಯ ಮುಖ್ಯಮಂತ್ರಿಯವರ ಪ್ರಭಾವವೋ ಅಥವಾ ಪತ್ರಿಕೆಯವರ ದುರ್ಲಕ್ಷವೋ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಚುನಾವಣೆಯಲ್ಲಿ ಅವರ ಕ್ಷೇತ್ರದಿಂದ ಗೆದ್ದು ಬಂದಾಗ ಲಾಡು ತಿನ್ನುತ್ತಿರುವುದನ್ನು ಅರ್ಧ ಪುಟದಲ್ಲಿ ಪ್ರಕಟಿಸಿದ್ದಾರೆ. ಅದಕ್ಕೆ ಪತ್ರಿಕೆಯಲ್ಲಿ ಜಾಗ ಇದೆ, ನಮಗೆ ಜಾಗ ಇಲ್ಲವೇ ಎಂದು ಪತ್ರಿಕೆಯವರನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ. ರೈತರ ಬೇಡಿಕೆಗಳನ್ನು ಈಡೇರಿಸಿಕೊಡದೇ ಹೋದರೆ ನಿಮ್ಮನ್ನು ನಾವು ಹಾಗೆಯೇ ಬಿಡುತ್ತೇವೆಂದು ನೀವು ತಿಳಿಯಬಾರದು, ಈ ದೇಶದಲ್ಲಿರತಕ್ಕಂಥ ೨ ಕೋಟಿ ರೈತಾಪಿ ಜನರನ್ನು ಸೇರಿಸಿಕೊಂಡು ಸತ್ಯಾಗ್ರಹ ಮಾಡುತ್ತೇವೆ. ಇವತ್ತಿನ ದಿವಸ ಕಾರ್ಪೊರೇಷನ್‌ಗೆ ನೀವು ಎಲೆಕ್ಷನ್ ಮಾಡಲಿಲ್ಲ. ಅಲ್ಲಿ ಅನೇಕ ಬೋರ್ಡ್‌ಗಳನ್ನು ಮಾಡಿಕೊಂಡು ಲಕ್ಷಾಂತರ ರೂಪಾಯಿಗಳಷ್ಟು ಹಣ ಅಪವ್ಯಯವಾಗುತ್ತಿದೆ. ಇವತ್ತಿನ ದಿವಸ ರೆವೆನ್ಯೂ, ಕೆ.ಜಿ.ಎಫ್.ನಲ್ಲಿರತಕ್ಕಂಥ ಫ್ಯಾಕ್ಟರಿಯನ್ನು ಮಾರಿಕೊಳ್ಳುತ್ತಿದ್ದೀರಿ. ಸಾಲದ್ದಕ್ಕೆ ವಿಧಾನ ಪರಿಷತ್ತಿನ ಪಧವಿಧರ ಕ್ಷೇತ್ರ ಮತ್ತು ಉಪಾಧ್ಯಾಯರ ಕ್ಷೇತ್ರಗಳನ್ನು ರದ್ದು ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದೀರಿ. ಇದು ನಿಮ್ಮ ಸರ್ಕಾರ ಆಡಳಿತ ನಡೆಸತಕ್ಕಂಥ ವೈಖರಿ! ನಾನು ಕೊನೆಯದಾಗಿ ಹೇಳಬಯಸುವುದೇನೆಂದರೆ ರೈತರ ಮೇಲೆ ಹಾಕಿರತಕ್ಕಂಥ ಟ್ಯಾಕ್ಸನ್ನು ಕಡಿಮೆ ಮಾಡಬೇಕು. ಈ ಬಗ್ಗೆ ಶ್ರೀ ಭಾನುಪ್ರತಾಪ್ ಸಿಂಗ್‌ರವರು ಈ ಪುಸ್ತಕದಲ್ಲಿ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಇದನ್ನು ನಿಮಗೆ ಕೊಡುತ್ತೇನೆ. ಇದರಲ್ಲಿರತಕ್ಕ ಸಲಹೆಗಳನ್ನು ಗಮನಿಸಿ ಅದನ್ನು ಕಾರ್ಯರೂಪಕ್ಕೆ ತರಬೇಕು ಎಂದು ಹೇಳುತ್ತೇನೆ. ನೀವು ೩೦ ವರ್ಷಗಳಿಂದ ರೈತರನ್ನು ಕೆಳಕ್ಕೆ ತುಳಿದಿದ್ದೀರಿ; ಇನ್ನು ಮುಂದೆ ಅವರನ್ನು ಕೆಳಕ್ಕೆ ತುಳಿಯುವುದಕ್ಕೆ ಆಗುವುದಿಲ್ಲ, ಅವರ ಬೇಡಿಕೆಗಳನ್ನು ನೀವು ಈಡೇರಿಸಬೇಕು ಅವರಿಗೆ ಎಲ್ಲಾ ಸಹಾಯ, ಸೌಲಭ್ಯಗಳು ಸರಿಯಾದ ರೀತಿಯಲ್ಲಿ ದೊರಕುವಂತೆ ನೋಡಿಕೊಳ್ಳಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷಿಣಿಯವರೇ, ಭಾರತಕ್ಕೆ ಕೀರ್ತಿ ತಂದ ಕರ್ನಾಟಕಕ್ಕೆ ಗೌರವ ತಂದುಕೊಟ್ಟಂಥ ವಿಜಯನಗರ ಸಾಮ್ರಾಜ್ಯದಲ್ಲಿ ಅನೇಕ ಜನ ಮಂತ್ರಿಗಳಿದ್ದರು. ಅವರಲ್ಲಿ ಪ್ರಮುಖ ಹಾಗೂ ಪ್ರತಿಭಾನ್ವಿತ ಮಂತ್ರಿಗಳೊಬ್ಬರಿದ್ದರು. ಅವರು ರಾಜ್ಯದ ಯಾವುದೇ ವಿಷಯವನ್ನು ಬಹಳ ಚಾಕಚಕ್ಯತೆಯಿಂದ ಕಾರ್ಯನಿರ್ವಹಿಸುವ ಸಾಮರ್ಥ್ಯವುಳ್ಳವರಾಗಿದ್ದರು. ಒಂದು ದಿನ ರಾಜರಿಗೆ ಯೋಚನೆ ಬಂದಿತು. ಈ ಮಂತ್ರಿಗೆ ಗೊತ್ತಿರದೆ ಇರುವ ವಿಷಯದಲ್ಲಿ ಕಾರ್ಯವನ್ನು ವಹಿಸಿಕೊಟ್ಟು ಅವರನ್ನು ಸೋಲಿಸಬೇಕೆಂದು ವಿಚಾರ ಮಾಡಿದರು. ಕುದುರೆ ಜೂಜು ಮಂತ್ರಿಗೆ ಗೊತ್ತಿಲ್ಲ; ಅದನ್ನವರಿಗೆ ವಹಿಸಬೇಕೆಂದು ಆಲೋಚನೆ ಮಾಡಿ, ಆ ಮಂತ್ರಿಯನ್ನು ಕರೆದು, ಒಂದು ಜೂಜಿನ ಕುದುರೆ ಕೊಟ್ಟು, ಇದನ್ನು ಜೂಜಿನಲ್ಲಿ ಗೆಲ್ಲಿಸಬಲ್ಲಿರಾ ಎಂದರು. ಅದಕ್ಕಾತ ಒಪ್ಪಿಕೊಂಡರು,

ಕುದುರೆಯನ್ನು ತೆಗೆದುಕೊಂಡು ಹೋಗಿ ಸ್ವಲ್ಪ ಸೊಗಸಾದ ಹುಲ್ಲು ಮತ್ತು ಒಂದು ಬಕೆಟ್ ನೀರನ್ನು ಮಾತ್ರ ಕೊಡುತ್ತಾ ಬಂದ. ಅಂತ ಕುದುರೆ ಜೂಜಿನಲ್ಲಿ ಎಂದಾದರೂ ಗೆಲ್ಲಬಲ್ಲುದೆ ? ಅಂತೂ ಜೂಜಿನ ದಿನ ಬಂತು. ಜೂಜಿಗೆ ಕುದುರೆಯನ್ನು ಬಿಡುವ ಸಮಯವಲ್ಲಿ ಆ ಮಂತ್ರಿ, ಕುದುರೆಯ ತಲೆಯ ಮೇಲೆ ಸ್ವಲ್ಪ ಹುಲ್ಲನ್ನು ನೇತು ಹಾಕಿದ. ಆ ಹುಲ್ಲು ಸ್ವಲ್ಪ ಸ್ವಲ್ಪವೇ ಬಾಯಿಗೆ ತಗುಲುತ್ತಿತ್ತು. ಹುಲ್ಲು ಸಿಕ್ಕುತ್ತದೆ, ಹುಲ್ಲು ಸಿಕ್ಕುತ್ತದೆ ಎಂದು ನೆಗೆನೆಗೆದು ವೇಗವಾಗಿ ಓಡಿತು ಕುದುರೆ ! ಕೊನೆಗೆ ಆ ಕುದುರೆಯೇ ಗೆದ್ದುಬಿಟ್ಟಿತು! ಆ ಕುದುರೆಯನ್ನು ಗೆಲ್ಲಿಸಿದ ಮಂತ್ರಿಯೇ ಪ್ರತಿಭಾನ್ವಿತ ತೆನಾಲಿ, ರಾಮ ಕೃಷ್ಣ ! ಆ ತೆನಾಲಿ ರಾಮಕೃಷ್ಣನ ಜೂಜಿನ ಕುದುರೆ ರೂಪದಲ್ಲಿದೆ ನಮ್ಮ ರಾಜ್ಯದ ಆಯವ್ಯಯ ಪತ್ರ. ಮನೆ ಕೊಡ್ತೀವಿ, ನಿವೇಶನ ಕೊಡ್ತೀವಿ, ಅದು ಕೊಡ್ತೀವಿ, ಇದು ಕೊಡ್ತೀವಿ ಎನ್ನುವ ಭವಿಷ್ಯಾದಿ ಭರವಸೆಗಳನ್ನು ಸೂಚಿಸಿ ಜನರ ಜೀವನದ ಅಪಾಯುವಾದ ಕಡೆಗೆ ಕೈಬೆರಳು ತೋರಿಸುವ ಆಯವ್ಯಯ ಪತ್ರವನ್ನು ಮಾನ್ಯ ಅರ್ಥ ಸಚಿವರು ಸಭೆಯ ಮುಂದೆ ಮಂಡಿಸಿದ್ದಾರೆ. ಈ ಮಾತಿಗೆ ಅಂಕಿ-ಅಂಶಗಳ ಆಧಾರವನ್ನು ತಮ್ಮ ಮುಂದೆ ಮಂಡಿಸಲು ನಾನು ಪ್ರಯತ್ನ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಸಾಕಷ್ಟು ಆಹಾರೋತ್ಪತ್ತಿ ಇದೆ ; ಆಹಾರ ಸಂಪತ್ತು ಯಥೇಚ್ಛವಾಗಿದೆ ಎಂದು ಮಾನ್ಯ ಅರ್ಥ ಸಚಿವರು ತಮ್ಮ ಆಯವ್ಯಯ ಭಾಷಣದಲ್ಲಿ ಹೇಳಿದ್ದಾರೆ. ಆದರೆ, ರೈತನು ತಾನು ಬೆಳೆದ ಪದಾರ್ಥ ಗಳಿಗೆ ಸಾಕಷ್ಟು ಬೆಲೆ ಇಲ್ಲ ಎನ್ನುವ ಕೂಗು ಇದೆ. ಇನ್ನೊಂದು ಕಡೆ ಆಹಾರ ಧಾನ್ಯ ನ್ಯಾಯವಾದ ಬೆಲೆಯಲ್ಲಿ ದೊರೆಯುತ್ತಿಲ್ಲ ಎನ್ನುವ ಕೂಗಿದೆ. ಹೀಗೆ ಜನರು ತತ್ತರಿಸುವುದಕ್ಕೆ ಕಾರಣವೇನು ? ಇಂತಹ ಕಷ್ಟಕರವಾದ ಪರಿಸ್ಥಿತಿ ನಮ್ಮ ರಾಜ್ಯಕ್ಕೆ ಬರಲು ಕಾರಣವೇನು ? ಇದಕ್ಕೆ ಕಾರಣ : ೧೯೭೨ ರಿಂದ ಇದುವರೆವಿಗೂ ತಾವು ಇರಿಸಿಕೊಂಡು ಬಂದ ನಿರ್ದೇಶನಗಳು ಸಮತೋಲನವಾಗಿಲ್ಲದಿರುವುದು. ಈ ವರ್ಷ ಮಾನ್ಯ ಹಣಕಾಸಿನ ಸಚಿವರು ಸಮದರ್ಶಿತ್ವವಿಲ್ಲದ ಆಯವ್ಯಯ ಪತ್ರವನ್ನು ಮಂಡಿಸಿದ್ದಾರೆ.

ದೇಶದಲ್ಲಿ ಉತ್ಪತ್ತಿ ಜಾಸ್ತಿಯಾಗುತ್ತಿದ್ದರೂ ಜನರಲ್ಲಿ ಹಾಹಾಕರ ಏತಕ್ಕೆ ಇನ್ನೂ ಹಾಗೇ ಇದೆ ? ಅನ್ನ ವಿಲ್ಲದೆ ಜನ ನಮ್ಮ ದೇಶದಲ್ಲಿ ಏತಕ್ಕೆ ಇನ್ನೂ ಸಾಯುತ್ತಿದ್ದಾರೆನ್ನುವುದು ತನಗೆ ಗೊತ್ತೆ ? ಏಕೆಂದರೆ, ನಮ್ಮ ಜನರಲ್ಲಿ ಕೊಳ್ಳುವ ಸಕ್ತಿ ಇಲ್ಲ. ಜನರಲ್ಲಿ ಕೊಳ್ಳುವ ಶಕ್ತಿಯನ್ನು ನಿರ್ಮಾಣ ಮಾಡುವ ಆಯ ವ್ಯಯ ಪತ್ರವನ್ನು ಸರ್ಕಾರ ಮಂಡಿಸಿಲ್ಲ. ಜನರಲ್ಲಿ ಕೊಳ್ಳುವ ಶಕ್ತಿಯನ್ನು ವೃದ್ಧಿ ಮಾಡುವ ಬಗ್ಗೆ ನಾವು ಯಾವೊಂದು ಪ್ರಯತ್ನವನ್ನೂ ಮಾಡಿಲ್ಲ. ಈ ದೃಷ್ಟಿಯಿಂದ ವಿಚಾರ ಮಾಡಿದಾಗ, ನಮ್ಮ ಜನರಲ್ಲಿ ಕೊಳ್ಳುವ ಶಕ್ತಿಯನ್ನು ವೃದ್ಧಿ ಮಾಡಬೇಕಾದರೆ ಅವರನ್ನು ಉದ್ಯೋಗಶೀಲರನ್ನಾಗಿ ಮಾಡ ಬೇಕಾಗಿದೆ, ಉತ್ಪಾದನೆ ಹೆಚ್ಚು ಇರುವ ಕಡೆ ಜನರನ್ನು ಉದ್ಯೋಗಶೀಲರನಾಗಿ ಮಾಡಬೇಕಾಗಿದೆ ಆದರೆ ಸಮತೋಲನವಿರುವ ವ್ಯವಹಾರ ನಿರ್ದೇಶನವನ್ನು ಸರ್ಕಾರ ಮಾಡಿಲ್ಲವೆನ್ನುವ ವಿಷಯವನ್ನು ಈ ಸದನದ ಮುಂದೆ ಮಂಡಿಸಬೇಕಾಗಿದೆ. ಪ್ಲಾನ್ ಔಟಲೇಯನ್ನು ಸ್ವಲ್ಪ ಮಟ್ಟಿಗೆ ಗಮನಿಸಿದರೆ, ನಾವು ಎಲ್ಲಿ ದಾರಿ ತಪ್ಪುತ್ತಿದ್ದೇವೆ ಎಂದು ಗೊತ್ತಾದೀತು. ೧೯೭೪ ರಿಂದ ೧೯೭೮ರ ವರೆಗೆ ವ್ಯವಸಾಯಕ್ಕಾಗಿ ನಾವು ವೆಚ್ಚ ಮಾಡಿರುವ ಹಣ ೩೫೬.೧೫ ಕೋಟಿ ರೂಪಾಯಿಗಳು. ಅಂದರೆ, ನಾವು ವ್ಯವಸಾಯ ಕ್ಕಾಗಿ ವೆಚ್ಚ ಮಾಡಿರುವುದು ಒಟ್ಟು ವೆಚ್ಚದಲ್ಲಿ ಕೇವಲ ಶೇಕಡ ೧೮. ಆದರೆ, ಈಗದು ಎಷ್ಟಾಗಿದೆ ? ೧೯೭೭ರಲ್ಲಿ ೧೬ ಪರ್ಸೆಂಟ್ ಇದ್ದುದು ೧೯೭೮ಕ್ಕೆ ೧೨ ಪರ್ಸೆಂಟ್‌ಗೆ ಇಳಿದಿದೆ. ಶೇಕಡ ೮೫ ಜನ ವ್ಯವ ಸಾಯವನ್ನವಲಂಬಿಸಿರುವ ಈ ದೇಶದಲ್ಲಿ ವ್ಯವಸಾಯಕ್ಕಾಗಿ ಖರ್ಚು ಮಾಡುತ್ತಿರುವ ಹಣ ವರ್ಷೇ ವರ್ಷೇ ಕಡಿಮೆಯಾಗುತ್ತಿರುವುದಲ್ಲದೆ, ಈ ವರ್ಷಕ್ಕೆ ಅದು ಶೇಕಡ ೧ ಕ್ಕೆ ಇಳಿದಿದೆ. ಇನ್ನು ಕೈಗಾರಿಕೆ ಮತ್ತು ಖನಿಜಗಳ ವಿಚಾರವಾಗಿ ನಾವು ಬಹಳ ಮುಖ್ಯವಾಗಿ ಗಮನಿಸಬೇಕಾಗಿದೆ. ಇಲ್ಲಿ ಏನು ದೋಷ ವಿದೆಯೆಂಬುದನ್ನು ನಾನು ಸಭೆಯ ಗಮನಕ್ಕೆ ತರಬಯಸುತ್ತೇನೆ. ೧೯೭೪ ರಿಂದ ೧೯೭೮ರವರೆಗೆ ಇದಕ್ಕಾಗಿ ೨೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅಂದರೆ, ಇದು ೩ ಪರ್ಸೆಂಟ್. ಇದನ್ನು ವರ್ಷೇ ವರ್ಷೇಯಾಗಿ ತೆಗೆದುಕೊಂಡರೆ, ೧೯೭೭-೭೮ಕ್ಕೆ ೫.೭೯ ಪರ್ಸೆಟ್, ೧೯೭೮-೭೯ಕ್ಕೆ ೫.೭೬ ಪಸೆಂಟ್ ಮತ್ತು ಈ ವರ್ಷಕ್ಕೂ ೫.೭೬ ಪರ್ಸೆಂಟ್. ಯಾವುದರಲ್ಲಿ ಉತ್ಪಾದನೆ ಜಾಸಿ ಇದೆ, ಅಲ್ಲಿ ಹೆಚ್ಚು ಹಣವನ್ನು ತೊಡಗಿಸುತ್ತಿಲ್ಲ. ಇನ್ನೂ ಸಮಾಜ ಕಲ್ಯಾಣ ಮತ್ತು ಸಾಮೂಹಿಕ ಸೇವೆಗಳ ಕುರಿತು ನೋಡೋಣ ಇದಕ್ಕಾಗಿ ಒಟ್ಟು ಆದಾಯದಲ್ಲಿ ೧೯ ಪರ್ಸೆಂಟ್ ವೆಚ್ಚವಾಗಿದೆ. ಅದು ೧೯೭೮-೭೯ಕ್ಕೆ ೨೧ ಪರ್ಸೆಂಟ್‌ಗೆ ಏರಿದೆ. ಆದರೆ, ಈ ವರ್ಷ ಮತ್ತೆ ೧೯ ಪಸೆಂಟ್‌ಗೆ ಇಳಿದಿದೆ. ಆದುದರಿಂದ ಜನರಲ್ಲಿ ಕೊಳ್ಳುವ ಶಕ್ತಿಯನ್ನು ವೃದ್ಧಿಸುವ ಕಡೆ ಗಮನ ಕೊಡದೆ, ಕೈಗಾರಿಕಾ ಕ್ಷೇತ್ರದಲ್ಲಿ ವರ್ಷೇ ವರ್ಷೇ ಬಂಡವಾಳ ಹಾಕುವುದನ್ನು ಕಡಿಮೆ ಮಾಡುತ್ತಾ ಬಂದಿರುವುದನ್ನು ಗಮನಿಸಿದರೆ ಗ್ರಾಮಾಂತರ

ಪ್ರದೇಶದ ಜನರಿಗೆ ಈ ಆಯವ್ಯಯದಿಂದ ಯಾವುದೇ ರೀತಿಯ ಉಪಕಾರದ ದರ್ಶನವಾಗಲೀ ಸೂಚನೆಯಾಗಲೀ ಇದ್ದಂತೆ ಕಾಣುತ್ತಿಲ್ಲ ಮತ್ತೆ ಹಣವನ್ನು ಏತಕ್ಕಾಗಿ ಖರ್ಚು ಮಾಡಲಾಗುತ್ತಿದೆ? ಹಣ ಖರ್ಚು ಮಾಡುವ ವಿಚಾರದಲ್ಲಿ ಡೆವಲಪ್‌ಮೆಂಟ್ ಮತ್ತು ನಾನ ಡೆವಲಪ್ಮೆಂಟ್ ಎಂದು ಎರಡು ಬಾಬುಗಳಿವೆ. ಈ ಎರಡರಲ್ಲಿರುವ ಸಮದೃಷ್ಟಿಯನ್ನು ತುಲನೆ ಮಾಡಬೇಕೆಂದು ಹೇಳುತ್ತೇನೆ. ನಾನ್ ಡೆವಲಪ್ಮೆಂಟ್ ವೆಚ್ಚ ತೆಗೆದುಕೊಂಡರೆ, ಮೊಟ್ಟಮೊದಲನೆಯದಾಗಿ ಶಾಸಕಾಂಗ. ಶಾಸಕಾಂಗಕ್ಕಾಗಿ ಪ್ರತಿ ವರ್ಷ ಎಷ್ಟು ಖರ್ಚಾಗುತ್ತಿದೆ ಎಂದರೆ, ೧೯೭೮-೭೯ರಲ್ಲಿ ೮೪ ಲಕ್ಷ ರೂಪಾಯಿಗಳಿದ್ದುದು, ಈ ವರ್ಷ ೧.೯ ಕೋಟಿ ರೂಪಾಯಿಗಳಿಗೆ ಏರಿದೆ. ಅಂದರೆ, ಈ ಸದನದಲ್ಲಿ ಕೆಲಸ ಮಾಡುವಾಗ ಒಂದು ಗಂಟೆಗೆ ೩೦ ಸಾವಿರ ರೂಪಾಯಿಗಳು ಖರ್ಚಾದರೆ ಒಂದು ನಿಮಿಷಕ್ಕೆ ೫೦೦ ರೂಪಾಯಿಗಳು ಖರ್ಚಾಗುತ್ತದೆ. ಒಂದು ಗಂಟೆಗೆ ಮೂವತ್ತು ಸಾವಿರ ರೂಪಾಯಿಗಳು ಖರ್ಚಾಗುತ್ತಿರುವಾಗ, ನಾವು ಈ ಗಂಟೆಯನ್ನು ಎಷ್ಟರಮಟ್ಟಿಗೆ ಉಪಯೋಗ ಮಾಡಿಕೊಳ್ಳುತ್ತಿದ್ದೇವೆನ್ನುವುದನ್ನು ಸದಸ್ಯರಾದ ನಾವುಗಳು, ಸರ್ಕಾರ ಮತ್ತು ಸಾರ್ವಜನಿಕರು ಬಹಳ ಗಹನವಾಗಿ ಆಲೋಚಿಸಬೇಕಾಗಿದೆ. ಇದರ ಬಗ್ಗೆ ಉಳಿದ ಸಮಯದಲ್ಲಿ ವಿವರವಾಗಿ ಪ್ರಸ್ತಾಪ ಮಾಡಬೇಕೆಂದಿದ್ದೇನೆ. ನಾನ್ ಡೆವಲಪ್ಮೆಂಟ್ ವೆಚ್ಚ ಕಳೆದ ವರ್ಷ ೧೬ ಲಕ್ಷ ಇದ್ದುದು ಈ ವರ್ಷ ೨೩ ಲಕ್ಷಕ್ಕೆ ಏರಿದೆ. ರಾಜ್ಯದ ಸಚಿವರುಗಳಿಗಾಗುವ ವೆಚ್ಚ ೪೭ ಲಕ್ಷದಿಂದ ೯೧ ಲಕ್ಷಕ್ಕೆ ಏರಿದೆ. ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್‌ಗಾಗುವ ವೆಚ್ಚ ೬೧೩ ರಿಂದ ೬೬೭ ಲಕ್ಷಕ್ಕೆ ಏರಿದೆ. ಸೆಕ್ರೆಟರಿಯಲ್ ಸರ್ವಿಸಸ್‌ಗಾಗುವ ವೆಚ್ಚ ೧೭೪ ರಿಂದ ೧೯೨ ಲಕ್ಷಕ್ಕೆ ಏರಿದೆ. ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ೫೪೭ ರಿಂದ ೫೭೫ ಲಕ್ಷಕ್ಕೆ ಏರಿದೆ. ಪಬ್ಲಿಕ್ ಎಜುಕೇಷನ್‌ಗೆ ೨,೫೬೦ ಲಕ್ಷ ರೂಪಾಯಿಗಳಿಂದ ಈ ವರ್ಷ ೩,೩೦೦ ಲಕ್ಷಕ್ಕೆ ಏರಿದೆ. ಪೋಲಿಸ್ ಮತ್ತು ಜೇಲ್ಸ್ ೨,೧೭೪ ಲಕ್ಷ ರೂಪಾಯಿಂದ ೨,೯೩೦ ಲಕ್ಷಕ್ಕೆ ಏರಿದೆ. ಅಂದರೆ ನಾನ್ ಡೆವಲಪ್ಮೆಂಟ್ ವೆಚ್ಚ ಪ್ರತಿ ವರ್ಷ ಏರುತ್ತಲೇ ಇದೆ.

ಇನ್ನು ಡೆವಲಪ್ಮೆಂಟ್ ಎಕ್ಸ್‌ಪೆಂಡಿಚರ್ ಕುರಿತು ಎಷ್ಟು ಖರ್ಚು ಮಾಡಲಾಗುತ್ತಿದೆ ಎಂಬುದನ್ನು ನೋಡೋಣ. ಡೆವಲಪ್ಮೆಂಟ್ ವಿಚಾರದಲ್ಲಿ ನಾವು ವಿಶೇಷವಾಗಿ ಗಮನಿಸಬೇಕಾದ್ದು : ಕೈಗಾರಿಕೆ, ನೀರಾವರಿ ಮತ್ತು ವಿದ್ಯುಚ್ಛಕ್ತಿ. ೧೯೭೮-೭೯ರಲ್ಲಿ ವ್ಯವಸಾಯದ ಅಭಿವೃದ್ಧಿಗಾಗಿ ೩,೪೬೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈ ವರ್ಷ ಹಳ್ಳಿಗರನ್ನು ಉದ್ಧಾರ ಮಾಡುವುದಕ್ಕೆ ಕೊಟ್ಟಿರುವುದು, ೩೯.೪೫ ಲಕ್ಷ ರೂಪಾಯಿಗಳು ಅಂದರೆ ಕೆಳಗೆ ಇಳಿದಿದ್ದೇವೆ. ಇಂಡಸ್ಟ್ರೀಸ್‌ಗೆ ೩,೪೬೨ ಲಕ್ಷ ರೂಪಾಯಿಗಳನ್ನು ೧೯೭೮-೭೯ರಲ್ಲಿ ಕೊಟ್ಟಿದ್ದೆವು ; ಮತ್ತೆ ಈ ವರ್ಷದ ಬಡ್ಜೆಟ್ಟಿನಲ್ಲಿ ೨,೬೪೯.೨೫ ಲಕ್ಷಕ್ಕೆ ಇಳಿದಿದೆ. ನೀರಾವರಿಗಾಗಿ ೧೯೭೮-೭೯ರಲ್ಲಿ ೫,೧೩೭ ಲಕ್ಷ ರೂಪಾಯಿಗಳು ಈ ವರ್ಷ ೫,೧೮೮.೭೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ ; ಇದರಲ್ಲಿ ಮಾತ್ರ ಸ್ವಲ್ಪ ಹೆಚ್ಚು ಹಣವನ್ನು ವೆಚ್ಚಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಿ. ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್‌ಗೆ ವರ್ಷ ವರ್ಷವೂ ಕಡಿಮೆ ಮಾಡುತ್ತಲೇ ಬಂದಿರುವುದನ್ನು ನಾವು ಇಲ್ಲಿ ಕಾಣಬಹುದು. ಒಟ್ಟು ಇಂಡಸ್ಟ್ರೀಸ್‌ಗೆ ೬ ಪರ್ಸೆಂಟ್ ಕೊಟ್ಟಿರುವುದು. ಇದರಲ್ಲಿ ಕೇಂದ್ರದಿಂದ ಬರತಕ್ಕುದು ಇತರೆ ಕಡೆಗಳಿಂದ ಬರತಕ್ಕದ್ದು ಇದೆ. ನಾವು ಹೊರಗಡೆಯಿಂದ ಪಡೆಯುತಕ್ಕ ಸಾಲಕ್ಕೆ ಕೊಡತಕ್ಕ ಬಡ್ಡಿ ೫,೬೪೯ ಲಕ್ಷ ರೂಪಾಯಿಗಳು ಅಂದರೆ ನಾವು ಕೊಡತಕ್ಕ ಬಡ್ಡಿ ಇಂಡಸ್ಟ್ರೀಸ್ ಮೇಲೆ ಉಪಯೋಗಿಸತಕ್ಕ ಹಣಕ್ಕಿಂತ ಹೆಚ್ಚು ಪಾಲು ಅಂದರೆ ೯ರಷ್ಟು ಹಣವನ್ನು ಬಡ್ಡಿರೂಪದಲ್ಲಿ ಕಟ್ಟುತ್ತಿದ್ದೇವೆ. ಸರ್ಕಾರದವರು ಹೇಳುತ್ತಾರೆ, ನಾವು ಉದ್ಯೋಗ ಕೊಟ್ಟಿದ್ದೇವೆಂದು ಉದ್ಯೋಗ ಕೊಟ್ಟಿರುವುದು ಎಷ್ಟು ೫ ಪರ್ಸೆಂಟ್, ೬ ಪರ್ಸೆಂಟ್. ಸರ್ಕಾರದ ವ್ಯವಹಾರ ಇಲ್ಲಿ ದಾರಿ ತಪ್ಪಿರುವುದರಿಂದ ದೇಶದಲ್ಲಿ ನಿಜವಾದ ಆರ್ಥಿಕ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಹಿಂದೆ [illegible]ರಲ್ಲಿ ಮಾನ್ಯ ಅರ್ಥ ಸಚಿವರು ಒಂದು ಮಾತನ್ನು ಹೇಳಿದ್ದಾರೆ ನಾವು ಹಳ್ಳಿಗಳನ್ನು [illegible]ಸುವುದಕ್ಕೆ ಯೋಜನೆಯನ್ನು ರೂಪಿಸುತ್ತಿದ್ದೇವೆಂದು. ೧೯೭೮ರ ನಂತರ [illegible] ಒಂದು ಯೋಜನೆಯೂ ಇಲ್ಲ, ಸರ್ಕಾರದವರು ಮಾಡಿಸಿರತಕ್ಕಂಥ ಆಯವ್ಯಯವನ್ನು [illegible] ಹಳ್ಳಿಗಳನ್ನು ನಗರಗಳನ್ನಾಗಿ ಮಾಡುವ ಬದಲು ನಗರಗಳನ್ನು ಹಳ್ಳಿಗಳನ್ನಾಗಿ ಮಾಡುವಂತ ಪದ್ಧತಿಯನ್ನು ನಾವು ನೋಡುತ್ತಿದ್ದೇವೆ. ಇವೊತ್ತಿನ ದಿವಸ ಪಟ್ಟಣ ಪ್ರದೇಶಗಳಲ್ಲಿ ದಿನೇ ದಿನೇ ಕೊಳಚೆ ಪ್ರದೇಶಗಳು ಬೆಳೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

೪-೦೦ ಪಿ. ಎಂ.

ಅಧ್ಯಕ್ಷರೇ, ೧೯೭೨ನೇ ಇಸವಿ ಆಯುವ್ಯಯ ಭಾಷಣದಲ್ಲಿ ಮಾನ್ಯ ಅರ್ಥ ಸಚಿವರು ಭಾಷಣ ಮಾಡುತ್ತಾ, ನಮ್ಮ ರಾಜ್ಯದಲ್ಲಿ ಕೇವಲ ೧೪೫೦ ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಬೇಕೆಂದು ಹೇಳಿದರು. ಆದರೆ, ಅಲ್ಲಿಂದೀಚೆಗೆ ಎನ್.ಆರ್ ಡಬ್ಲ್ಯು ಸ್ಕೀಮಿನಲ್ಲಿ ೧೯೭೨-೭೩ರಲ್ಲಿ ಕುಡಿಯುವ ನೀರಿನ ಭಾವಿಗಳಿಗಾಗಿ ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ೭೩-೭೪ರಲ್ಲಿ ೧೯೩೯.೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ೧೯೭೪-೭೫ರಲ್ಲಿ ೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ೬೭೧ ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. ೧೯೭೫-೭೬ರಲ್ಲಿ ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಂದರೆ ೧೯೭೨ನೇ ಇಸವಿಯಿಂದ ೭೫-೭೬ನೇ ಇಸವಿಯ ವರೆಗೆ ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ೧೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳಿದಂತಾಯಿತು. ಮತ್ತೆ ಈ ವರ್ಷದ ಆಯುವ್ಯಯದಲ್ಲಿ ಮಾನ್ಯ ಅರ್ಥಮಂತ್ರಿಗಳು ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅನೇಕ ಬಾವಿಗಳನ್ನು ತೆಗೆಸುವ ವ್ಯವಸ್ಥೆ ಮಾಡಲಾಗುವುದೆಂದು ತಿಳಿಸಿದ್ದಾರೆ. ಆವೊತ್ತಿನದಿವಸ ೧೪೬೦ ಹಳ್ಳಿಗಳು ಉಳಿದಿದ್ದವು, ೧೯೭೨ ರಿಂದ ಇಲ್ಲಿಯುವರೆಗೆ ೧೨ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೂ ಕೂಡ ಕುಡಿಯುವ ನೀರನ್ನು ಹಳ್ಳಿಗಳಿಗೆ ಒದಗಿಸುವುದಕ್ಕೆ ಸಾಧ್ಯವಾಗಿಲ್ಲ ಎಂದರೆ ಬಹಳ ಶೋಚನೀಯವಾಗುತ್ತದೆ ಗ್ರಾಮಗಳ ಲೆಕ್ಕವನ್ನು ಸರ್ಕಾರದವರು ಇಟ್ಟಿದ್ದಾರೆಯೆ ? ಇವೊತ್ತಿನದಿವಸ ೨೯,೦೦೦ ಗ್ರಾಮಗಳ ಪೈಕಿ ಸುಮಾರು ೬,೦೦೦ ಗ್ರಾಮಗಳು ನದಿಯ ನೀರನ್ನೇ ಅವಲಂಭಿಸಿವೆ. ೧೨ ಕೋಟಿ ರೂಪಾಯಿಗಳನ್ನು ಖರ್ಚುಮಾಡಿರತಕ್ಕ ಲೆಕ್ಕ ಮಾತ್ರ ಇಲ್ಲಿ ತೋರಿಸಿದ್ದಾರೆ.

ಇನ್ನು ಹಳ್ಳಿಗಳಿಗೆ ವಿದ್ಯುತ್ತೀಕರಣಗೊಳಿಸಿರುವ ಬಗ್ಗೆ ೧೯೭೨ನೇ ಇಸವಿಯ ಬಡ್ಜೆಟ್ ಭಾಷಣದಗಿ ಹೇಳಿದ್ದಾರೆ. ಇನ್ನು ಕೇವಲ ೧೨,೪೦೦ ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿ ಇಲ್ಲ, ೬೫ ಪರ್ಸೆಂಟ್ ವಿದ್ಯುಚ್ಛಕ್ತಿ ಆಗಿದೆಯೆಂದು. ಮತ್ತೆ ೧೯೭೩ನೇ ಇಸವಿ ಭಾಷಣದಲ್ಲಿ ೧೭,೫೦೦ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಿದ್ದೇವೆಂದು ಹೇಳಿದರು. ೧೯೭೫ರ ಭಾಷಣದಲ್ಲಿ ೧೨೩೫ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಿದ್ದೇವೆಂದು ಹೇಳಿದರು ಆದರೂ ಇವೊತ್ತಿನವರೆಗೆ ಎಷ್ಟೋ ಹಳ್ಳಿಗಳಿಗೆ ಸಾಕಷ್ಟು ವಿದ್ಯುಚ್ಛಕ್ತಿ ಒದಗಿಸಿಲ್ಲ, ಈ ಮಾತನ್ನು ಬಹಳ ಸೂಕ್ಷ್ಮವಾಗಿ ಆಲೋಚನೆ ಮಾಡಬೇಕು. ಹಳ್ಳಿಯ ಜನರ ಅಭ್ಯುದಯ ಬಗ್ಗೆ ಸರ್ಕಾರದ ಭಾವನೆ ಒಳ್ಳೆಯದೇ, ಆದರೆ ನಡೆದುಹೋದಂತ ದಾರಿ ಒಳ್ಳೆಯದಲ್ಲ. ಹೋಗತಕ್ಕಂಥ ಮಾರ್ಗ ಕ್ರಮಬದ್ಧವಾಗಿಲ್ಲ. ಅರ್ಥಶಾಸ್ತ್ರಬದ್ಧವಾಗಿಲ್ಲವೆಂದು ಹೇಳಬೇಕಾಗಿದೆ. ಗ್ರಾಮಾಂತರ ಪ್ರದೇಶದ ಜನತೆಗೆ ಮನೆ ಕಟ್ಟಿಸಿ ಕೊಡುವ ವಿಚಾರವನ್ನು ನಮ್ಮ ಸರ್ಕಾರದವರು ಹೇಳುತ್ತಲೇ ಬಂದಿದ್ದಾರೆ. ೭೦-೭೧ರಲ್ಲಿ ೭ ೨೯ ಲಕ್ಷ ಸೈಟುಗಳನ್ನು ಕೊಟ್ಟಿದ್ದೀರಿ, ೧೯೭೬ಕ್ಕೆ ಬಂದಾಗ ೭ ೧ಲಕ್ಷ ಸೈಟುಗಳನ್ನು ಕೊಟ್ಟಿದ್ದೀರಿ, ಮತ್ತೆ ೫.೧ ಲಕ್ಷ ಸೈಟು ಕೊಟ್ಟಿದ್ದೀರಿ, ಇಷ್ಟೆಲ್ಲಾ ಸೈಟುಗಳನ್ನು ಕೊಟ್ಟಿದ್ದರೂ ಕೊಡುವ ವಿಚಾರದಲ್ಲಿ ಆರ್ಥಿಕದೃಷ್ಟಿ ಇದೆಯೆ ? ೧೯೭೨ ರಿಂದ ೧೯೭೪ರ ವರೆಗೆ ೨,೯೨,೭೭೫ ಸೈಟು ಕೊಟ್ಟಿದ್ದೀರಿ ; ೧೯೭೫ನೇ ಇಸವಿಯಲ್ಲಿ ೩,೩೫,೩೧೧ ಸೈಟುಗಳನ್ನು ಕೊಟ್ಟಿದ್ದೀರಿ ; ೧೯೭೬ನೇ ಇಸವಿಯಲ್ಲಿ ೬,೩೫,೩೪೩ ಸೈಟುಗಳನ್ನು ಕೊಟ್ಟಿದ್ದೀರಿ: ೧೯೭೭ನೇ ಇಸವಿಯಲ್ಲಿ ೭,೪೫,೫೨೯ ಸೈಟುಗಳನ್ನು ಕೊಟ್ಟಿದ್ದೀರಿ: ಅಂದರೆ ೧೯೭೭ನೇ ಇಸವಿಯುವರೆಗೆ ೨೦,೭,೯೫೯ ಸೈಟು ಕೊಟ್ಟಿದ್ದಿರಿ : ಸುಮಾರು ಒಂದು ಕೋಟಿ ಜನಕ್ಕೆ ಸೈಟುಗಳನ್ನು ಕೊಟ್ಟಂತಾಯಿತು. ಒಂದು ಕೋಟಿ ಜನ ಮನೆ ರಹಿತ ಇಲ್ಲದಿದ್ದಂತವರು ನಮ್ಮ ದೇಶದಲ್ಲಿ ಇದ್ದರೆ? ತಾವು ಕೊಡತಕ್ಕಂತ ಅಂಕಿ ಅಂಶಗಳು ನಿಜವಾಗಿಯೂ ಕೂಡ ಆರ್ಥಿಕ ದೃಷ್ಟಿಯಲ್ಲಿವೆಯೋ ಎಂದು ಪ್ರಶ್ನೆ ಹಾಕಬೇಕಾಗಿದೆ. ಪ್ರತಿ ವ[illegible] ೭ ಲಕ್ಷ, ೯ ಲಕ್ಷ ಹೀಗೆ ಹೆಚ್ಚುತ್ತಾ ಹೋಗಿದೆ. ತಮ್ಮಯಾವುದೇ ಒಂದು ಯೋಜನೆಯು [illegible] ಆಧಾರದ ಮೇಲೆ ರೂಪುಗೊಂಡಿಲ್ಲ. ಮನುಷ್ಯನಲ್ಲಿಕೊಳ್ಳುವ ಶಕ್ತಿಯನ್ನು, ಆರ್ಥಿಕ ವ್ಯವಸ್ಥೆಯನ್ನು ಉತ್ಪತ್ತಿ ಮಾಡತಕ್ಕ ಯೋಜನೆ ತಮ್ಮಲ್ಲಿ ಇಲ್ಲ ಇವೊತ್ತಿನ ದಿವಸ ಮನೆಯಿಲ್ಲದವನಿಗೆ ಮನೆ ಕಟ್ಟಿಕೊಡುವಂತ ವ್ಯವಸ್ಥೆ ಮಾಡಬೇಕಾಗಿಲ್ಲ : ಅವನಿಗೆ ದಾನ ಕೊಡಬೇಕಾಗಿಲ್ಲ : ಅವನಿಗೆ ಉದ್ಯೋಗ ಕೊಟ್ಟು ಕೊಳ್ಳುವ ಶಕ್ತಿ ಬರುವಂತಾದರೆ ಅವನು ಮನೆ ಕಟ್ಟಿಕೊಳ್ಳುತ್ತಾನೆ.

ಇವೊತ್ತು ಸರ್ಕಾರದ ಕೈಗಾರಿಕೆಗಳಲ್ಲಿ ಎಷ್ಟು ಜನ ನಿರುದ್ಯೋಗಿಗಳಿಗೆ ಹಿಂದುಳಿದವರಿಗೆ ಉದ್ಯೋಗ ಕೊಟ್ಟಿದ್ದೀರಿ, ಭದ್ರಾವತಿ ಕಾರ್ಖಾನೆಯಲ್ಲಿ ಇತರ ಕಾರ್ಖಾನೆಗಳಲ್ಲಿ ೧೪ ಪರ್ಸೆಂಟ್, ೫೦ ಪರ್ಸೆಂಟ್

ಉದ್ಯೋಗ ಕೊಟ್ಟಿದ್ದೀರಾ ? ನೌಕರಿ ಒದಗಿಸಿದರೆ ನಿಮ್ಮಿಂದ ಏನನ್ನು ಅವನು ಅಪೇಕ್ಷೆ ಮಾಡುವುದಿಲ್ಲ. ಜನತೆಯನ್ನು ಭಿಕ್ಷುಕರನ್ನಾಗಿ ಮಾಡುವ ಬದಲು ಉದ್ಯೋಗಶೀಲರನ್ನಾಗಿ ಮಾಡಿ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಆರೋಗ್ಯದ ವಿಚಾರದಲ್ಲಿ ತಮ್ಮ ಭಾಷಣದಲ್ಲಿ ಇರತಕ್ಕ ವ್ಯತ್ಯಾಸದ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಮ್ಮ ಭಾಷಣದಲ್ಲಿ ೧೦೫೦ ಜನಕ್ಕೆ ಒಂದು ಹಾಸಿಗೆ ಇದೆ ಎಂದು ಹೇಳಿದ್ದೀರಿ : ಹೋದವರ್ಷ ರಾಜ್ಯಪಾಲರ ಭಾಷಣದಲ್ಲಿ ೯೦೦ ಜನಕ್ಕೆ ಒಂದು ಹಾಸಿಗೆ ಇದೆ ಎಂದು ಹೇಳಿದ್ದೀರಿ : ಈ ವರ್ಷ ೧೦೫೦ ಜನಕ್ಕೆ ಒಂದು ಹಾಸಿಗೆ ಇದೆ ಎಂದು ಹೇಳಿದ್ದೀರಿ : ೧೯೭೭-೭೮ರಲ್ಲಿ ರಾಜ್ಯಪಾಲರ ಭಾಷಣದಲ್ಲಿ ೭,೫೦೦ ಜನಕ್ಕೆ ಒಬ್ಬ ಡಾಕ್ಟರು ಇದ್ದಾರೆಂದು ತಿಳಿಸಿದ್ದರು : ತಮ್ಮ ಭಾಷಣ ದಲ್ಲಿ ೨,೩೦೦ ಜನಕ್ಕೆ ಒಬ್ಬ ಡಾಕ್ಟರು ಇದ್ದಾರೆಂದು ತಿಳಿಸಿದ್ದೀರಿ ೧೯೭೭ರಲ್ಲಿ ೩,೩೮೩ ಜನ ಡಾಕ್ಟರು ಗಳು ಇದ್ದರು ಎಂದು ಹೇಳಿದ್ದೀರಿ : ೧೯೭೨ಕ್ಕೆ ೪,೦೦೦ ಜನ ಡಾಕ್ಟರುಗಳು ಇದ್ದಾರೆಂದು ತಿಳಿಸಿದ್ದೀರಿ. ಏಕದಂ ೨,೩೮೦ ಜನಕ್ಕೆ ಒಬ್ಬ ಡಾಕ್ಟರುಗಳನ್ನು ಹೇಗೆ ಒದಗಿಸಿದಿರಿ : ತಾವು ಒದಗಿಸಿರತಕ್ಕ ಅಂಕಿಅಂಶ ಗಳಲ್ಲಿ ಸತ್ಯಾಂಶ ಇದೆಯೆ ? ಸುಮಾರು ೩೭,೩೫,೫೫೦೦೦ ಕೋಟಿ ರೂಪಾಯಿಗಳನ್ನು ಈ ಆರೋಗ್ಯ ಇಲಾಖೆಗೆ ಖರ್ಚು ಮಾಡುತ್ತಿದ್ದೇವೆ ; ಅದರಲ್ಲಿ ಔಷಧಿಗಾಗಿ ಅಂದರೆ ಔಷಧಿ ಕೊಳ್ಳುವುದಕ್ಕಾಗಿ ೪,೩೦,೭೫,೦೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡತ್ತೇವೆ ಅಂದರೆ ಒಬ್ಬ ಮನುಷ್ಯನಿಗೆ ತಲಾ ೧.೩೦ ಪೈಸೆ ಖರ್ಚು ಮಾಡಿದಂತಾಯಿತು ಮೂರು ಸಾರಿಡಾನ್ ಮಾತ್ರೆ ಕೊಟ್ಟರೆ ಮುಗಿದುಹೋಯಿತು.

ಇನ್ನು ನೀರಾವರಿ ಬಗ್ಗೆ ಬಹಳ ಅಭಿಮಾನದಿಂದ ಹೇಳಿದ್ದೀರಿ. ೧೯೭೭ರಲ್ಲಿ ೮.೫೮ ಲಕ್ಷ ಹೆಕ್ಟೇರ್ ಭೂಮಿ ಇದ್ದುದು ೧೯೭೯ರ ಮಾರ್ಚಿಗೆ ೨೦.೩೩ ಲಕ್ಷ ಹೆಕ್ಟೇರ್ ಮಾಡಿದ್ದೇವೆಂದು ಹೇಳಿದ್ದೀರಿ, ೧೯೭೧-೭೨ರ ಲೆಕ್ಕದಲ್ಲಿ ೧೩ಲಕ್ಷದ ೭೭ಸಾವಿರದ ೫೯ ಹೆಕ್ಟೇರ್ ಭೂಮಿ ಇತ್ತು ಈಗ ೨೦ ಲಕ್ಷಕ್ಕೆ ಏರಿಸಿದ್ದೇ ವೆಂದು ಹೇಳಿದರೆ ಇದರ ಬಗ್ಗೆ ತಮ್ಮ ಗಮನವನ್ನು ಸೆಳೆಯಬೇಕಾಗಿದೆ. ಫಸ್ಟ್ ಫೈವ್ ಇಯರ್ ಪ್ಲಾನ್, ಸೆಕೆಂಡ್ ಫೈವ್ ಇಯರ್ ಪ್ಲಾನ್, ಥರ್ಡ್ ಫೈವ್ ಇಯರ್ ಪ್ಲಾನ್, ಅನ್ಯುಯಲ್ ಪ್ಲಾನ್, ಫೋರ್ತ್ ಫೈವ್ ಇಯರ್ ಪ್ಲಾನ್ ಇಷ್ಟು ಯೋಜನೆಗಳಲ್ಲಿ ೧೯೭೧-೭೨ರಿಂದ ೯೭೮-೭೯ರ ವರೆಗೆ ೩೩೫.೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ೧೯೭೯ರಲ್ಲಿ ನಿಮ್ಮ ಪ್ಲಾನ್ ಪ್ರಕಾರ ೧೩.೩೦ ಲಕ್ಷ ಹೆಕ್ಟೇರ್ ಭೂಮಿ ನೀರಾವರಿಯಾಗುತ್ತಿತ್ತು. ೧೯೭೪ನೇ ಇಸವಿಯಲ್ಲಿ ೧೫.೯೪ ಲಕ್ಷ ಹೆಕ್ಟೇರ್ ಭೂಮಿ ನೀರಾವರಿ ಆಯಿತು. ೧೯೭೮-೭೯ರ ತಮ್ಮ ಭಾಷಣದಲ್ಲಿ ೨೦.೩೩ ಲಕ್ಷ ಹೆಕ್ಟೇರ್ ಭೂಮಿ ನೀರಾವರಿ ಮಾಡಿದ್ದೇ ವೆಂದು ಹೇಳಿದ್ದೀರಿ. ನೀವು ಎಷ್ಟು ಮಾಡಿದ್ದೀರಾ ಎಂದು ಲೆಕ್ಕ ಹಾಕಿದರೆ ೪.೩೯ ಲಕ್ಷ ಹೆಕ್ಟೇರ್ ಭೂಮಿ ಮಾತ್ರ ನೀರಾವರಿ ಮಾಡಿದ್ದೀರಾ. ಇದು ೧೯೭೩-೭೪ರಿಂದ ಈಚೆಗೆ ೧೯೭೨ ೭೩ರಿಂದ ೧೯೭೭-೭೮ರ ವರೆಗೆ ೪೪೮ ೪೧ ಕೋಟಿ ರೂಪಾಯಿ ಖರ್ಚು ಮಾಡಿದ್ದೀರಾ. ೧೯೬೧ರಿಂದ ೧೯೭೧-೭೨ರ ವರೆಗೆ ೨೬೦.೫ ಕೋಟಿ ರೂಪಾಯಿ ಖರ್ಚು ಮಾಡಿ ೧೫ ೯೪ ಲಕ್ಷ ಹೆಕ್ಟೇರ್ ನೀರಾವರಿ ಭೂಮಿ ಮಾಡಿದ್ದರೆ, ೪.೩೯ ಲಕ್ಷ ಹೆಕ್ಟೇರ್ ನೀರಾವರಿ ಭೂಮಿಗೆ ನೀವು ಖರ್ಚು ಮಾಡಿರತಕ್ಕ ಹಣ ೪೪೮.೪೧ ಕೋಟಿ ರೂಪಾಯಿ. ಅಂದರೆ ೧೦ ವರ್ಷದಲ್ಲಿ ಮಾಡಿದ್ದರ ಡಬ್ಬಲ್ ಹಣ ಖರ್ಚು ಮಾಡಿದ್ದೀರಾ. ಮೂರನೆ ಒಂದು ಭಾಗ ಮಾತ್ರ ನೀರಾವರಿ ಮಾಡಿದ್ದೀರಾ ಇದಕ್ಕೆ ಕಾರಣ ಏನು ಆದರ ಬಗ್ಗೆ ನಾನು ವಿಸ್ತರಿಸುವುದಕ್ಕೆ ಹೋಗುವುದಿಲ್ಲ. ಅದನ್ನು ಸಮಯ ಬಂದಾಗ ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಬಹಳ ಅಭಿಮಾನದಿಂದ ಹೇಳುತ್ತಿದ್ದೀರಿ. ಇದರ ಬಗ್ಗೆ ನಮ್ಮ ದೇಶದಲ್ಲಿ ಎಷ್ಟು ಪ್ರಗತಿ ಸಾಧಿಸಿದ್ದೀರಾ ಎಂದು ಹೇಳುತ್ತೇನೆ. ನಮ್ಮ ದೇಶದಲ್ಲಿ ೧೯೬೧-೬೨ರಲ್ಲಿ ಇದ್ದಂತಹ ಲೋಯರ್ ಪ್ರೈಮರಿ ಸ್ಕೂಲುಗಳು ೨೧,೯೯೬. ೧೯೭೭-೭೮ಕ್ಕೆ ೨೧,೯೭೭ ಅಂದರೆ ಒಂದು ಸ್ಕೂಲು ಮಾತ್ರ ಜಾಸ್ತಿಯಾದಂತೆ ಆಯಿತು. ಇನ್ನು ಹೈಯರ್ ಪ್ರೈಮರಿ ಸ್ಕೂಲು ೧೯೬೧-೬೨ರಲ್ಲಿ ೬,೯೪೮. ೧೯೭೭-೭೮ಕ್ಕೆ ೧೧,೪೯೭, ೧೯೭೧-೭೨ರಿಂದ ೧೯೭೭-೭೮ರ ವರೆಗೆ ಹೆಚ್ಚು ಮಾಡಿರುವ ಹೈಯರ್ ಪ್ರೈಮರಿ ಸ್ಕೂಲ್ ೫೧೪ ಮಾತ್ರ. ೧೯೬೧ರಿಂದ ೧೯೭೧ರ ವರೆಗೆ ೪೦೪೦ ಹೈಯರ್ ಪ್ರೈಮರಿ ಸ್ಕೂಲು ಹೆಚ್ಚಿದಂತಾಯ್ತು ಆದರೆ ೧೯೭೧-೭೨ರಿಂದ ಒಟ್ಟು ೧೯೭೭ ೭೮ಕ್ಕೆ ೫೧೪ ಸ್ಕೂಲುಗಳನ್ನು ಮಾತ್ರ ಹೆಚ್ಚು ಮಾಡಿದ್ದೀರಾ. ಹಾಗೆ ಟೀಚರ್ಸ್ ೧೯೬೧-೬೨ರಲ್ಲಿ ೭೮,೧೬೫ ಜನ ಉಪಾಧ್ಯಾಯರು ಇದ್ದರು. ೧೯೭೧-೭೨ಕ್ಕೆ ೯೭,೬೩೩ ಜನ ಉಪಾಧ್ಯಾಯರುಗಳು ಆದರು. ಅಂದರೆ ೧೦ ವರ್ಷದಲ್ಲಿ ೧೯.೪೬೮ ಜನ ಉಪಾಧ್ಯಾಯರಿಗೆ ಹಿಂದಿನ ಕಾಲದಲ್ಲಿ ಕೆಲಸ ಕೊಟ್ಟಿದೆ. ೧೯೭೧-೭೨ರಿಂದ ೧೯೭೭-೭೮ರ ವರೆಗೆ ೫,೪೭೨ ಜನರಿಗೆ ಉದ್ಯೋಗ ಕೊಟ್ಟಿದ್ದೀರಾ. ಇದರಿಂದ ನೀವು ಎಷ್ಟರ ಮಟ್ಟಿಗೆ ಮಾಡಿದ್ದೀರಾ ಎನ್ನುವುದನ್ನು

ಗಮನಿಸಬೇಕು. ಈ ರೀತಿಯಾಗಿ ನೀವು ಎಷ್ಟು ಕೊಡಬೇಕಾಗಿತ್ತೋ ಅಷ್ಟು ಕೊಟ್ಟಿಲ್ಲ. ಇದು ನಿಮ್ಮ ದೋಷವೇ ಅಲ್ಲ. ಕೇಂದ್ರ ಸರ್ಕಾರದ ಯೋಜನೆಯಲ್ಲೂ ಕೂಡ ದೋಷ ಇದೆ. ನಿಮ್ಮ ಮೊದಲನೆ ಯೋಜನೆ ಫಸ್ಟ್ ಪ್ಲಾನಿನಲ್ಲಿ ೪೯ ಕೋಟಿ ರೂಪಾಯಿ ಅದು ೭.೬ ಪರ್‌ಸೆಂಟ್ ಇತ್ತು. ಎರಡನೆಯ ಯೋಜನೆಗೆ ೫.೮ ಪರ್‌ಸೆಂಟಿಗೆ ಇಳಿಯಿತು. ಮೂರನೆಯ ಯೋಜನೆಗೆ ೭.೭ ಪರ್‌ಸೆಂಟಿಗೆ ಇಳಿಯಿತು. ನಾಲ್ಕನೇ ಯೋಜನೆಗೆ ೫ ೭ಪರ್‌ಸೆಂಟ್‌ಗೆ ಇಳಿಯಿತು. ಐದನೇ ಯೋಜನೆಗೆ ೪.೧ ಪರ್‌ಸೆಂಟ್‌ಗೆ ಇಳಿದಿದೆ. ವರ್ಷೇ ವರ್ಷೇ ದೇಶದಲ್ಲಿ ಅಜ್ಞಾನ ಬೆಳೆಯುತ್ತಿದೆ. ಅವಿದ್ಯಾವಂತರ ಜನಸಂಖ್ಯೆ ಬೆಳೆಯುತ್ತಿದೆ. ಈಗ ಐದನೇ ಪ್ಲಾನ್‌ಗೆ ನಿಮ್ಮ ಕಾಲಕ್ಕೆ ಬರುವುದರೊಳಗೆ ೪.೧ ಪರ್‌ಸೆಂಟ್ ಖರ್ಚು ಮಾಡುತ್ತಿದ್ದೀರಿ. ಅಂದರೆ ಎಷ್ಟು ಹಣ ನಾವು ವಿದ್ಯಾಭ್ಯಾಸಕ್ಕೆ ವಿನಿಯೋಗ ಮಾಡಬೇಕಾಗಿತ್ತೋ ಅದನ್ನು ಮಾಡುತ್ತಿಲ್ಲ. ಎಂದು ಯೋಜನೆಗಳ ಸಮದೃಷ್ಟಿಯಿಂದ ನೋಡಿದಾಗ ಗೊತ್ತಾಗುತ್ತದೆ. ಈ ದೃಷ್ಟಿಯಿಂದ ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡದೇ ಕಾಲ ಬಂದಾಗ ವಿವರಣೆ ಕೊಡುವ ಪ್ರಯತ್ನ ಮಾಡುತ್ತೇನೆ.

ಇನ್ನು ವಕ್ಫ್ ಡೆವಲೆಪ್‌ಮೆಂಟ್ ಕಾರ್ಪೊರೇಷನ್ ಮಾಡಿದ್ದೀರಾ. ಅದಕ್ಕೆ ಒಂದು ಕೋಟಿ ರೂಪಾಯಿ ಲೋನ್ ಕೊಟ್ಟಿದ್ದೀರಾ. ಅಲ್ಲದೆ ೫ ಕೋಟಿ ರೂಪಾಯಿಯ ಒಂದು ಗ್ಯಾರಂಟಿ ಕೊಟ್ಟಿದ್ದೀರಾ. ಅದನ್ನು ನಾನು ಸ್ವಾಗತಿಸುತ್ತೇನೆ ಆದರೆ ಅದೇ ರೀತಿ ಬಹು ಮಂದಿ ಇರತಕ್ಕ ಹಿಂದೂಗಳು ಕೂಡ ಇದ್ದಾರೆ. ಕೋಟ್ಯಾಂತರ ರೂಪಾಯಿಗಳ ಆಸ್ತಿಪಾಸ್ತಿಗಳು ನಷ್ಟವಾಗುತ್ತಿರುವಾಗ ಇದಕ್ಕೂ ಕೂಡ ಒಂದು ಸಂಸ್ಥೆ ಇರಬೇಕು. ಅದರ ಬಗ್ಗೆ ಬಡ್ಜೆಟ್ಟಿನಲ್ಲಿ ಒಂದು ಮಾತನ್ನು ಕೂಡ ಹೇಳಿಲ್ಲ. ಈ ದೇಶದ ಜನ ಬದುಕಬೇಕೋ ಏನೋ ಗೊತ್ತಿಲ್ಲ. ಹಿಂದೂಗಳಿಗೂ ಕೂಡ ಏತಕ್ಕೆ ಒಂದು ಬೋರ್ಡ್ ಮಾಡಿಲ್ಲಾ. ಇದರ ಬಗ್ಗೆ ಸರ್ಕಾರ ಗಮನಿಸದೇ ಇರುವುದರಿಂದ ಸಂಕಟಪಡಬೇಕಾಗಿದೆ.

ಇನ್ನು ಇನ್‌ಫರ್‌ಮೇಷನ್ ಅಂಡ್ ಪಬ್ಲಿಸಿಟಿ ವಿಚಾರದಲ್ಲಿ ಹೇಳಬೇಕು ಅಂದರೆ ಅವರು ನಮ್ಮ ದೇಶದಲ್ಲಿ ಏನು ಉಪಕಾರ ಮಾಡುತ್ತಿದ್ದಾರೆ, ೪,೩೫೦ ಇಂಗ್ಲೀಷ್ ಸ್ಟೋರಿ ಪಬ್ಲಿಷ್ ಮಾಡಿದ್ದಾರೆ. ೨,೨೨೮ ಕನ್ನಡ ಸ್ಟೋರಿ ಪಬ್ಲಿಷ್ ಮಾಡಿದ್ದಾರೆ. ಅಂದರೆ ೧ : ೨ ಆಯಿತು, ಇನ್ನು ಕನ್ನಡ ಫಿಲಂಸ್ ಬಗ್ಗೆ ತಾವು ಹಳ್ಳಿಗಳಲ್ಲಿ ಪ್ರದರ್ಶನವಾಗುವ ಸಿನಿಮಾಗಳಿಗೆ ರಿಯಾಯಿತಿ ಕೊಡುತ್ತೇವೆಂದು ಹೇಳುತ್ತೀರಿ. ಅದೇ ಬೆಂಗಳೂರು, ಮೈಸೂರು, ಮಂಗಳೂರು ನಗರಗಳಲ್ಲಿ ಕನ್ನಡ ಜನ ಬೆವರು ಸುರಿಸಿ, ರಕ್ತ ಸುರಿಸಿ ತಯಾರು ಮಾಡಿರತಕ್ಕ ಚಲನ ಚಿತ್ರಗಳನ್ನು ಪ್ರದರ್ಶಿಸಲು ಚಿತ್ರಮಂದಿರಗಳು ಸಿಕ್ಕುತ್ತಿಲ್ಲ. ಇದರ ಬಗ್ಗೆ ನಾವು ಏನು ವ್ಯವಸೆ ಮಾಡಿದ್ದೇವೆ. ಅದೇ ಮದ್ರಾಸ್, ಬೊಂಬಾಯಿ ನಗರಗಳಲ್ಲಿ ಒಂದು ಕನ್ನಡ ಚಲನಚಿತ್ರ ಪ್ರದರ್ಶನವಾಗಬೇಕಾದರೆ ಮೂರು ವರ್ಷ ಕಾಯಬೇಕು. ಅದೇ ನಮ್ಮ ನಗರದಲ್ಲಿ ಇತರೇ ಚಿತ್ರಗಳು ತಾಂಡವಾಡುತ್ತಿವೆ. ಕೇವಲ ಕೆಲವು ಹಳ್ಳಿಗಳಲ್ಲಿ ಪ್ರದರ್ಶನ ಮಾಡುವುವಕ್ಕೆ ಟ್ಯಾಕ್ಸ್ ಫ್ರೀ ಮಾಡುವುದು ಬೇಡ. ನಗರದಲ್ಲಿ ಪ್ರದರ್ಶನ ಮಾಡತಕ್ಕಂತಹ ಚಿತ್ರಗಳಿಗೂ ಕೂಡ ರಿಯಾಯಿತಿ ಕೊಡಬೇಕೆಂದು ಹೇಳುತ್ತೇನೆ ವಿಭಿನ್ನ ಚಿತ್ರಗಳ ಪ್ರದರ್ಶನ ನಡೆಸಿದರೆ ಅದಕ್ಕೆ ಒಂದಕ್ಕೆರಡರಷ್ಟು ತೆರಿಗೆ ಹಾಕಿ ಆ ರೀತಿ ಬಂದಂತಹ ತೆರಿಗೆಯಿಂದ ಕನ್ನಡ ಚಿತ್ರಗಳಿಗೆ ಪ್ರೋತ್ಸಾಹ ಕೊಡಬೇಕು. ಇನ್ನು ಮೈಸೂರು, ಬೆಂಗಳೂರು ಮುಂತಾದ ಪ್ರತಿಯೊಂದು ಚಲನಚಿತ್ರಮಂದಿರಗಳಲ್ಲೂ ವರ್ಷಕ್ಕೆ ಮೂರು ತಿಂಗಳುಗಳ ಕಾಲ ಕನ್ನಡ ಚಲನಚಿತ್ರವನು ಪ್ರದರ್ಶನ ಮಾಡಲೇಬೇಕುಎಂದು ಕಡ್ಡಾಯವಾಗಿ ಕಾನೂನು ಮಾಡಲೇಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ೧೯೭೨ರಿಂದ ತಾವು ಹಾಕಿಕೊಂಡಿರತಕ್ಕ ಕೆಲವು ಯೋಜನೆಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಅವುಗಳ ವಿವರಣೆಯನ್ನು ಮಾಡಲಿಕ್ಕೆ ಹೋಗುವುದಿಲ್ಲ. ರೂರಲ್ ಅರ್ಬನೈಜೇಷನ್ ಸ್ಕೀಮ್ ಯೋಜನೆಯಲ್ಲಿ ಯಾವುದೂ ಇಲ್ಲ. ೧೯೭೪ರಲ್ಲಿ ಟೆಕ್ನಿಕಲ್ ಯೂನಿವರ್ಸಿಟಿ ಆಫ್ ಸಂಡೂರ್‌ಗೆ ೧೦ ಲಕ್ಷ ರೂಪಾಯಿ ಕೊಟ್ಟರು ಅದು ಏನು ಆಯಿತೋ ಗೊತ್ತಿಲ್ಲ. ಟೆಕ್ನಿಕಲ್ ಯೂನಿವರ್ಸಿಟಿ ಬರಲಿಲ್ಲ. ಕಮ್ಯಾಂಡ್ ಏರಿಯಾ ಡೆವಲೆಪ್‌ಮೆಂಟ್ ಅಥಾರಿಟಿ ಬಿಲ್ ಬಂದಿದೆ ಅದು ಏನಾಯಿತು ಗೊತ್ತಾಗಲಿಲ್ಲ. ಸ್ಟೇಟ್ ಕೌನ್ಸಿಲ್ ಫಾರ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಅದಕ್ಕೆ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದಾರೆ. ಅದರ ಕಾರ್ಯ ಸ್ವರೂಪ ಏನಾಯಿತು ಗೊತ್ತಿಲ್ಲ. ಈ ದೇಶದಲ್ಲಿ ಇಂತಹ ಅನೇಕ ಸಮಸ್ಯೆಗಳು ಇವೆ. ಈಗ ಕರ್ನಾಟಕದಲ್ಲಿ ಒಂದು ಸಂಸ್ಕೃತ ವಿಶ್ವವಿದ್ಯಾನಿಲಯ ಆಗಬೇಕಾಗಿದೆ.

[ಅಧ್ಯಕ್ಷರು ಪೀಠವನ್ನಲಂಕರಿಸಿದರು]

ಕರ್ನಾಟಕಕ್ಕೆ ಒಂದು ಒಳ್ಳೆಯ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಕೊಡಲು ಕೇಂದ್ರ ಸರ್ಕಾರ ಸಹಾಯ ನೀಡುತ್ತದೆ. ಇದಕ್ಕೆ ಮೈಸೂರು ನಗರದಲ್ಲಿ ಉತ್ತಮವಾದ ಒಂದು ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ತಿಳಿಸಬಯಸುತ್ತೇನೆ,

ಮಾನ್ಯ ಅಧ್ಯಕ್ಷರೆ, ನಮಗೆ ಇನ್ನೊಂದು ಬಹಳ ಹೆಚ್ಚಳಿಕೆಯ ಮಾತು ಎಂದರೆ ಭೂ ಸುಧಾರಣ ಕಾಯಿದೆ ತಂದದ್ದು. ಇದುವರೆಗೆ ಸುಮಾರು ೪ ಲಕ್ಷ ಅರ್ಜಿಗಳನ್ನು ಭೂ ಸುಧಾರಣೆಗೆ ಸಂಬಂಧಿಸಿದಂತೆ ಇತ್ಯರ್ಥಮಾಡಿ ಮುಗಿಸಿದ್ದೇವೆ, ಸರ್ಕಾರಕ್ಕೆ ಹೆಚ್ಚುವರಿ ಜಮೀನು ಸುಮಾರು ಒಂದು ಲಕ್ಷ ಚಿಲ್ಲರೆ ಎಕರೆ ಸಿಕ್ಕಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ ಆದರೆ ನಾನು ಹೇಳುತ್ತೇನೆ ಇನ್ನೂ ಲಕ್ಷಾಂತರ ಎಕರೆ ಹೆಚ್ಚುವರಿ ಜಮೀನಿದ್ದರು ಅದನ್ನು ನೀವು ಕಂಡುಹಿಡಿದು ನಿಮ್ಮ ವಶಕ್ಕೆ ತೆಗೆದುಕೊಳ್ಳುವುದಕ್ಕಾಗಿಲ್ಲ. ಪಕ್ಕದ ರಾಜ್ಯಗಳಾದ ಆಂಧ್ರ ಕೇರಳಗಳಲ್ಲಿ ಈ ಭೂ ಸುಧಾರಣ ಕಾನೂನನ್ನು ಯಶಸ್ವಿಯಾಗಿ ಜಾರಿಗೆ ತಂದಿದ್ದಾರೆ. ಭೂಮಿಯನ್ನು ಉಳುಮೆ ಮಾಡುತ್ತೇನೆಂದು ಮುಂದೆ ಬರತಕ್ಕ ಬಡವ ಗೆ ನೀವು ಇವತ್ತು ಜಮೀನನ್ನು ಕೊಡುತ್ತಿಲ್ಲ, ಪಕ್ಕದ ರಾಜ್ಯಗಳವರು ಯಾವ ರೀತಿ ನೀತಿ ನಿಯಮಗಳನ್ನನುಸರಿಸುತ್ತಿದ್ದಾರೆ ಅದರಂತೆ ನೀವು ಅನುಸರಿಸುತ್ತಿಲ್ಲ. ಇನ್ನು ವಿಧವೆಯರಿಗೆ ಪರಿಹಾರವನ್ನು ಕೊಡುತ್ತಿರುವ ಬಗ್ಗೆ ಹೇಳುವುದಾದರೆ, ೧೯೭೧-೭೨ರಲ್ಲಿ ಯಾರು ವಿಧವೆಯರಾಗಿದ್ದರು ಅವರಿಗೆ ಮಾತ್ರ ಪೂರ್ತಿ ಸೌಲತ್ತು ಕೊಡುತ್ತಿದ್ದೀರಿ. ಆದರೆ ನೀವು ಪರಿಹಾರ ಕೊಡತಕ್ಕ ಕಾಲದಲ್ಲಿ ಯಾರು ವಿಧವೆಯರಾಗಿರುತ್ತಾರೆ ಅವರಿಗೂ ಕೂಡ ಪೂರ್ತಿ ಪರಿಹಾರವನ್ನು ಕೊಡಬೇಕು ನಿಮಗಿಂತಲೂ ನಾನು ಒಂದು ಹೆಜ್ಜೆ ಮುಂದೆ ಹೋಗಿ ಬಹಳ ಹಿಂದೆಯೇ ಈ ಭೂ ಸುಧಾರಣೆ ಬಗ್ಗೆ ಆ ಸದನದಲ್ಲಿ ಹೇಳಿದ್ದೇನೆ. ಯಾರು ತನ್ನ ಭೂಮಿಯನ್ನು ಕಳೆದುಕೊಳ್ಳುತ್ತಾನೆ ಅವನಿಗೆ ಪರಿಹಾರ ಕೊಡಿ ಇಲ್ಲವೆ ಹೊಟ್ಟೆಗೆ ಅನ್ನ ಕೊಡಿ. ಆದರೆ ಅವನು ಭೂಮಿಯನ್ನು ಕಳೆದುಕೊಂಡು ಭಿಕಾರಿಯಾಗುವಂತೆ ಮಾಡಬೇಡಿ ತಕ್ಕಡಿಯನ್ನು ಒಂದು ಕಡೆ ಮೇಲಕ್ಕೆತ್ತಿ, ಇನ್ನೊಂದು ಕಡೆ ಕೆಳಗೆ ಇಳಿಸುವಂತಹ ನೀತಿಯನ್ನು ಅನುಸರಿಸಲು ಹೋಗಬೇಡಿ. ಒಟ್ಟಿನಲ್ಲಿ ಇಷ್ಟು ಮಾತ್ರ ಹೇಳಬಯಸುತ್ತೇನೆ. ಇವತ್ತು ಸಭೆಯ ಮುಂದೆ ಏನೊಂದು ಆಯವ್ಯಯ ಪಟ್ಟಿಯನ್ನು ಮಂಡಿಸಿದ್ದೀರಿ ಅದು ಸಮತೋಲನವಿಲ್ಲದ ಏರುಪೇರಿನ ಅಂದಾಜುಪಟ್ಟಿಯಾಗಿದೆ ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Supplementary Demands for grants for 1978-79- Demands for grants (on account) (General Discussion)

MR. SPEAKER :—We will now stop discussion on the Budget estimates for the year 1979-80 and will continue the discussion on the 6th April when we meet again according to the decision of the Business Advisory Committee. Now, we will take up discussion and voting of Demands for Supplementary Grants for the year 1978-79 and discussion and voting of Demands for Grants on account for the year 1979-80.

SRI S. R. BOMMAI—Sir, I have given notice of a matter under Rule 312. I was assured that the Health Minister would come after one hour then. I waited and again raised the matter. The Hon. Whip was good enough to say that immediately after General Discussion on the Budget Estimates the matter could be raised. Therefore, I would like to raise it now; I cannot wait. It is a very important matter. Let any Minister take the responsibility for answering it. It is a question involving loss of lakhs of rupees to the Exchequer.